# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಬುಧವಾರ, ಸೆಪ್ಟೆಂಬರ್ 04, 2024

ಸಂಪುಟ : 51 ಸಂಚಿಕೆ : 113 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


# ಕಾನೂನು ಸುವ್ಯವಸ್ಥೆಯೂ ನಾಗರಿಕ ಹಕ್ಕು

## ಪೊಲೀಸ್ ಕರ್ತವ್ಯ ಕೂಟ ಉದ್ಘಾಟಿಸಿದ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ



ದಾವಣಗೆರೆ, ಸೆ. 3 - ಕಾನೂನು ಸುವ್ಯ ವಸ್ಥೆ ಹೊಂದುವುದೂ ಸಹ ನಾಗರಿಕರ ಹಕ್ಕು ಗಳಲ್ಲಿ ಒಂದಾಗಿದೆ. ಈ ಹಕ್ಕು ಒದಗಿಸಲು ಅಪರಾಧ ಪತ್ತೆ ಹಾಗೂ ತನಿಖಾ ವ್ಯವಸ್ಥೆ ಬಲಿಷ್ಠವಾಗಿರಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪೂರ್ವ ವಲಯ ಪೊಲೀಸ್ ಕರ್ತವ್ಯ ಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಅಪರಾಧಗಳನ್ನು ಪತ್ತೆ ಮಾಡಿ ಪ್ರಕರಣ ನೋಂದಾಯಿಸಿ, ಆರೋಪ ಪಟ್ಟಿ ದಾಖಲಿಸುವುದರ ಜೊತೆಗೆ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುವವರೆಗೂ ಪೊಲೀಸರ ಜವಾಬ್ದಾರಿ ಇರುತ್ತದೆ. ನ್ಯಾಯಾಲಯದಲ್ಲಿ ಪ್ರಕರಣಗಳ ವಿಚಾರಣೆಯನ್ನು ಜವಾಬ್ದಾರಿಯಿಂದ ಗಮನಿಸಬೇಕು. ವಿಚಾರಣೆ ಪೂರ್ಣಗೊಳ್ಳುವವರೆಗೂ ಉದಾಸೀನತೆ ತೋರಬಾರದು ಎಂದವರು ಕಿವಿಮಾತು ಹೇಳಿದರು.

ಪೊಲೀಸರು ಹೆಚ್ಚು ಕೌಶಲ್ಯ ಹೊಂದುವುದರಿಂದ ಅಪರಾಧ ನಿಗ್ರಹಕ್ಕೆ ನೆರವಾಗುತ್ತದೆ. ಹೀಗಾಗಿ ಕರ್ತವ್ಯ ಕೂಟಗಳು ಅತ್ಯಂತ ಮಹತ್ವ ಪಡೆದಿವೆ.

ಇಲ್ಲಿ ಕಲಿಯುವ ಕೌಶಲ್ಯ (2ನೇ ಪುಟಕ್ಕೆ)

# ಡೆಂಗ್ಯೂ ಸಾಂಕ್ರಾಮಿಕ ಕಾಯಿಲೆ

## ರಾಜ್ಯ ಸರ್ಕಾರ ಘೋಷಣೆ, ಸೊಳ್ಳೆ ಹರಡುವಿಕೆಗೆ ಕಾರಣವಾದರೆ ದಂಡ




ಬೆಂಗಳೂರು, ಸೆ. 3- ಡೆಂಗ್ಯೂ ಹರಡುವಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕ್ರಮಕ್ಕೆ ಮುಂದಾಗಿರುವ ರಾಜ್ಯ ಸರ್ಕಾರ, ಡೆಂಗ್ಯೂ ಅನ್ನು ಸಾಂಕ್ರಾಮಿಕ ಕಾಯಿಲೆ ಎಂದು ಘೋಷಿಸಿದೆ. ಸ್ವಚ್ಛತೆ ಕಾಪಾಡದೆ ಸೊಳ್ಳೆ ಹರಡಲು ದಾರಿ ಮಾಡಿಕೊಡುವವರಿಗೆ ದಂಡ ವಿಧಿಸಲಾಗುವುದು ಎಂದು ರಾಜ್ಯ ಸರ್ಕಾರದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಮನೆ, ಖಾಲಿ ಜಾಗ, ಕಟ್ಟಡದ ಬಳಿ ಸ್ವಚ್ಛತೆ ಕಾಪಾಡಬೇಕು. ಸೊಳ್ಳೆ ಸಂತಾನೋತ್ಪತ್ತಿ ಹರಡಲು ಅವಕಾಶ ನೀಡದಂತೆ ಕ್ರಮವಹಿಸಬೇಕು. ಒಂದು ವೇಳೆ ನಿಯಮ ಉಲ್ಲಂಘಿಸಿದರೆ ಮಾಲೀಕರಿಗೆ ದಂಡ ವಿಧಿಸಬಹುದಾಗಿದೆ.

ನಿವೇಶನ ಅಥವಾ ಖಾಲಿ ಜಾಗದಲ್ಲಿ ನೀರು ನಿಲ್ಲದಂತೆ ಕ್ರಮ ವಹಿಸಬೇಕು. ನೀರು ನಿಂತಿರುವುದು ಕಂಡು ಬಂದರೆ ನೋಟಿಸ್ ನೀಡಿ ದಂಡ ವಿಧಿಸಲಾಗುವುದು.

ಸ್ವತ್ತಿನ ಮಾಲೀಕರು ನಿಗಾ ವಹಿಸಿದೆ ಇದ್ದರೆ, ಸಂಬಂಧ ಪಟ್ಟ ಅಧಿಕಾರಿ ಸೊಳ್ಳೆ ಉತ್ಪತ್ತಿಯಾಗದಂತೆ ಕ್ರಮ ವಹಿಸಬೇಕು.

ರಾಸಾಯನಿಕವನ್ನು ಸಿಂಪಡಿಸಬೇಕು. ಇದಕ್ಕೆ ಖರ್ಚಾದ ವೆಚ್ಚವನ್ನು ಸಂಬಂಧ ಪಟ್ಟವರು ನೀಡುವಂತೆ ಕ್ರಮ ವಹಿಸಬೇಕು ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಮನೆಗಳಿಗೆ ಹೊರಾಂಗಣ ಹಾಗೂ ಒಳಾಂಗಣದಲ್ಲಿ ನಿಯಮ ಉಲ್ಲಂಘಿಸಿದರೆ ನಗರ ಪ್ರದೇಶದಲ್ಲಿ 400 ರೂಪಾಯಿ ಹಾಗೂ ಗ್ರಾಮಾಂತರದಲ್ಲಿ 200 ರೂಪಾಯಿ ದಂಡ ವಿಧಿಸಲಾಗುವುದು.

ವಾಣಿಜ್ಯ ಪ್ರದೇಶಗಳಲ್ಲಿ ನಿಯಮ ಉಲ್ಲಂಘನೆಯಾದರೆ ನಗರ ಪ್ರದೇಶಗಳಲ್ಲಿ 1,000 ರೂ. ಹಾಗೂ ಗ್ರಾಮೀಣ ಭಾಗದಲ್ಲಿ 500 ರೂ.ಗಳ ದಂಡ ವಿಧಿಸಲಾಗುವುದು.

ಕಟ್ಟಡ ನಿರ್ಮಾಣ ಸ್ಥಳ, ಖಾಲಿ ಬಿಡಲಾದ ಕಟ್ಟಡ ನಿರ್ಮಾಣ ಸ್ಥಳ ಹಾಗೂ ಬಯಲು ಪ್ರದೇಶಗಳಲ್ಲಿ ಸೊಳ್ಳೆ ಹರಡಿರುವುದು ಕಂಡು ಬಂದರೆ ನಗರ ಪ್ರದೇಶಗಳಲ್ಲಿ 2 ಸಾವಿರ ರೂ. ಹಾಗೂ ಗ್ರಾಮೀಣ ಭಾಗದಲ್ಲಿ ಒಂದು ಸಾವಿರ ರೂ.ಗಳ ದಂಡ ವಿಧಿಸಲಾಗುವುದು.

# ಸೈನ್ಯಕ್ಕೆ ಬಲ ತುಂಬಲು ಕೇಂದ್ರ ಒಪ್ಪಿಗೆ

## ಸೈನ್ಯದ ಆಧುನೀಕರಣಕ್ಕೆ 1.44 ಲಕ್ಷ ಕೋಟಿ ರೂ. ಖರೀದಿ ಪ್ರಸ್ತಾಪಕ್ಕೆ ಅಸ್ತು



ನವದೆಹಲಿ, ಸೆ. 3- ಸೈನ್ಯದ ಆಧುನಿಕರಣಕ್ಕಾಗಿ 1.44 ಲಕ್ಷ ಕೋಟಿ ರೂ.ಗಳ ಶಸ್ತ್ರಾಸ್ತ್ರಗಳ ಖರೀದಿಗಾಗಿ ರಕ್ಷಣಾ ಸಚಿವಾಲಯ ಒಪ್ಪಿಗೆ ನೀಡಿದೆ.

ನವದೆಹಲಿ, ಸೆ.3- ಟ್ಯಾಂಕ್ ದಳಕ್ಕೆ ಭವಿಷ್ಯಕ್ಕೆ ಸಿದ್ಧವಾದ ಸಮರ ವಾಹನಗಳು (ಎಫ್.ಆರ್.ಸಿ.ವಿ.) ಹಾಗೂ ವೈಮಾನಿಕ ರಕ್ಷಣೆಗೆ ರಡಾರ್ ಸೇರಿದಂತೆ ಸೈನ್ಯಕ್ಕೆ ಅಗತ್ಯವಾದ ಹಲವಾರು ಖರೀದಿಗಳಿಗೆ ಒಪ್ಪಿಗೆ ನೀಡಲಾಗಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ರಕ್ಷಣಾ ಖರೀದಿ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಪೈಕಿ ಶೇಕಡಾ 99 ರಷ್ಟು ದೇಶಿಯ ಮೂಲಗಳಿಂದ ಬರಲಿದೆ. ಇವುಗಳು ದೇಶೀಯವಾಗಿ ವಿನ್ಯಾಸಗೊಳಿಸಿ ಹಾಗೂ ಉತ್ಪಾದಿಸಿದವು ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸೈನ್ಯದ ಟ್ಯಾಂಕ್ ವಿಭಾಗದ ಭವಿಷ್ಯಕ್ಕೆ ಸಿದ್ಧವಾದ ಸಮರ ವಾಹನಗಳನ್ನು ಖರೀದಿಸುವ ಪ್ರಸ್ತಾಪಕ್ಕೆ ಒಪ್ಪಿಗೆ ನೀಡಲಾಗಿದೆ. ಎಫ್.ಆರ್.ಸಿ.ವಿ.ಗಳು ಭವಿಷ್ಯದ ಪ್ರಮುಖ ಸಮರ ಟ್ಯಾಂಕ್ ಆಗಿರಲಿವೆ. ಇವು ಉನ್ನತ ಚಲನಾ ಸಾಮರ್ಥ್ಯ, ಎಲ್ಲ ಪ್ರದೇಶಗಳಲ್ಲಿ ಕಾರ್ಯನಿರ್ವಹಣೆ, ಹಲವು ಹಂತದ ರಕ್ಷಣೆ, ನಿಖರತೆ ಹಾಗೂ ಹೆಚ್ಚಿನ ಶಕ್ತಿ ಹೊಂದಿರಲಿವೆ. ವೈಮಾನಿಕ ರಕ್ಷಣಾ ನಿಯಂತ್ರಣ ರಡಾರ್‌ಗಳ ಖರೀದಿಗೂ ಒಪ್ಪಿಗೆ ನೀಡಲಾಗಿದೆ. ಇವು ವೈಮಾನಿಕ ಗುರಿಗಳನ್ನು ಪತ್ತೆ ಮಾಡಲು ನೆರವಾಗಲಿವೆ.

ಸೈನ್ಯದ ಉಪಕರಣಗಳನ್ನು ಸ್ಥಳದಲ್ಲೇ ದುರಸ್ತಿ ಮಾಡುವ ಮುಂಚೂಣಿ ದುರಸ್ತಿ ತಂಡ ಯೋಜನೆಗೂ ಒಪ್ಪಿಗೆ ನೀಡಲಾಗಿದೆ. ಆರ್ಮರ್ಡ್ ವೆಹಿಕಲ್ಸ್ ನಿಗಮ ನಿಯಮಿತವು ಈ ಉಪಕರಣವನ್ನು ರೂಪಿಸಿ ಅಭಿವೃದ್ಧಿ ಪಡಿಸಲಿದೆ (4ನೇ ಪುಟಕ್ಕೆ)

# ಸ್ವಚ್ಛ, ಹಸಿರು ನಗರ; ಅಗತ್ಯ ಜನರ ಸಹಕಾರ

## ಘನತ್ಯಾಜ್ಯ, ಕುಡಿಯುವ ನೀರು ಸರಬರಾಜು ಕುರಿತ ಕಾರ್ಯಾಗಾರದಲ್ಲಿ ಸಂಸದೆ ಡಾ.ಪ್ರಭಾ ಎಸ್ಸೆಸ್ಸೆಂ



ದಾವಣಗೆರೆ, ಸೆ.3- 'ಸ್ಮಾರ್ಟ್‌ಸಿಟಿ' ಎಂಬುದು ಹೆಸರಿಗೆ ಸೀಮಿತವಾಗದೆ ನಿಜವಾದ ಅರ್ಥದಲ್ಲಿ ರೂಪುಗೊಳ್ಳಬೇಕು. ಹಸಿರು ನಗರವಾಗಿ ಬೆಳೆಯಬೇಕು. ಇದಕ್ಕಾಗಿ ಜನಪ್ರತಿನಿಧಿಗಳು, ಅಧಿಕಾರಿಗಳ ಜತೆಗೆ ಸಾರ್ವಜನಿಕರ ಸಹಕಾರವೂ ಮುಖ್ಯವಾಗಿದೆ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ನಗರದ ಪೂಜಾ ಇಂಟರ್ ನ್ಯಾಷನಲ್ ಹೋಟೆಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ, ಘನತ್ಯಾಜ್ಯ ಮತ್ತು ಕುಡಿಯುವ ನೀರು ಸರಬರಾಜು ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದರು.

ಹಂತ ಹಂತವಾಗಿ ಘನತ್ಯಾಜ್ಯ ಮತ್ತು ಕುಡಿಯುವ ನೀರಿನ ನಿರ್ವಹಣೆಯಲ್ಲಿ ದಾವಣಗೆರೆಯ ನಂ. 1 (4ನೇ ಪುಟಕ್ಕೆ)

### ಸರ್ಕಾರದ ಸೌಲಭ್ಯ ನಮ್ಮದೆಂಬ ಭಾವನೆ ಬರಬೇಕಿದೆ: ಸಿನ್ಹ

ಸರ್ಕಾರ ನೀಡುವ ಯಾವುದೇ ಸೌಲಭ್ಯ ನಮ್ಮದು ಎಂಬ ಭಾವನೆ ಜನರಲ್ಲಿ ಬರಬೇಕಿದೆ. ಆಗ ಮಾತ್ರ ಯಶಸ್ಸು ಸಾಧ್ಯ ಎಂದು ಹರಿಯಾಣ ಗುರುಗ್ರಾಮದ ಫೀಡ್‌ಬ್ಯಾಕ್ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಜಯ್ ಸಿನ್ಹ ಹೇಳಿದರು.

ರಾಜ್ಯದಲ್ಲಿ 140 ಎಪಿಎಂಸಿಗಳಿವೆ. ಆ ಪೈಕಿ ಯಶವಂತಪುರ ಮತ್ತು ಧಾರವಾಡ ಎಪಿಎಂಸಿಗಳಲ್ಲಿ ತ್ಯಾಜ್ಯವನ್ನು ಕಸ ಸಂಗ್ರಹಣಾ ಘಟಕಕ್ಕೆ ಕಳಿಸದೇ, ಸ್ಥಳೀಯವಾಗಿಯೇ ಕಸದಿಂದ ರಸ ಮಾಡುವ ಪ್ರಯತ್ನ ಯಶಸ್ವಿಯಾಗಿದೆ. ಅಂಥ ಕೆಲಸವನ್ನು ದಾವಣಗೆರೆಯಲ್ಲೂ ಮಾಡಲು ಸಾಧ್ಯ ಎಂದರು.

ಘನತ್ಯಾಜ್ಯ ವಿಲೇವಾರಿ ಮತ್ತು ನೀರು ಸರಬರಾಜು ಸಂಬಂಧ ತಮ್ಮ ಸಂಸ್ಥೆಯು ಕರ್ನಾಟಕದಲ್ಲೂ ಕೆಲಸ ಮಾಡುತ್ತಿದೆ.

ವಿಶ್ವಬ್ಯಾಂಕ್ ನೆರವಿನಡಿ ಹಾವೇರಿ, ಧಾರವಾಡ, ಗದಗ ಜಿಲ್ಲೆಗಳಲ್ಲಿ ಪೈಲಟ್ ಯೋಜನೆಯನ್ನು ಆರಂಭಿಸಲಾಯಿತು. ಈಗ 8 ಜಿಲ್ಲೆಗಳಲ್ಲಿ ನಡೆಯುತ್ತಿದೆ ಎಂದು ಹೇಳಿದರು.

# ಹರಿಹರ ತಾಲ್ಲೂಕು ಹಿಂಡಸಘಟ್ಟದ ಅರುಣ್‌ಗೆ ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ



ಬೆಂಗಳೂರು, ಸೆ.3- ಹರಿಹರ ತಾಲ್ಲೂಕಿನ ಹಿಂಡಸಘಟ್ಟ ಕ್ಯಾಂಪ್‌ನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಬಿ.ಅರುಣ್ ಕುಮಾರ್ ಅವರು ರಾಜ್ಯ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಅರುಣ್ ಕುಮಾರ್ ಅವರೂ ಸೇರಿದಂತೆ, ರಾಜ್ಯದ ಒಟ್ಟು 31 ಶಿಕ್ಷಕರನ್ನು ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಕರ್ನಾಟಕ ಸರ್ಕಾರ ಆಯ್ಕೆ ಮಾಡಿದೆ. ಇವರಲ್ಲಿ ಓರ್ವ ವಿಶೇಷ ಶಿಕ್ಷಕರೂ ಸೇರಿದ್ದಾರೆ. ಈ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಮಹಾಂತಯ್ಯ ಎಸ್. ಹೊಸಮಠ ಅವರು ಇಂದು ಆದೇಶ ಹೊರಡಿಸಿದ್ದಾರೆ.

ಪ್ರತಿ ವರ್ಷ ಸೆಪ್ಟೆಂಬರ್ 5ರ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ರಾಜ್ಯ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಯನ್ನು ಸರ್ಕಾರ ನೀಡುತ್ತಿದ್ದು, ತಲಾ 25 ಸಾವಿರ ರೂ. ನಗದು ಪುರಸ್ಕಾರದೊಂದಿಗೆ ಸನ್ಮಾನಿಸಿ, ಗೌರವಿಸಲಾಗುತ್ತದೆ. ನಾಡಿದ್ದು ದಿನಾಂಕ 5ರಂದು ಏರ್ಪಾಡಾಗಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಎಲ್ಲಾ ಪುರಸ್ಕೃತರನ್ನು ಸನ್ಮಾನಿಸಲಾಗುತ್ತದೆ.

ಚಿತ್ರದುರ್ಗ ಜಿಲ್ಲೆಯಿಂದ ಹಿರಿಯೂರು ತಾಲ್ಲೂಕಿನ ಮ್ಯಾಕ್ಲೂರಹಳ್ಳಿ ಬಳಿಯ ಹೊಸಹಟ್ಟಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಆರ್.ಟಿ. ಪರಮೇಶ್ವರಪ್ಪ ಮತ್ತು ಹಾವೇರಿ ಜಿಲ್ಲೆಯಿಂದ ಬ್ಯಾಡಗಿ ತಾಲ್ಲೂಕಿನ ಅತ್ತಿಕಟ್ಟೆ ಗ್ರಾಮದ (4ನೇ ಪುಟಕ್ಕೆ)

# ಹೆದ್ದಾರಿ ಸರ್ವೀಸ್ ರಸ್ತೆ ಪೂರ್ಣಗೊಳಿಸಿ



### ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ

ದಾವಣಗೆರೆ, ಸೆ.3- ದಾವಣಗೆರೆಯ ಕೆಲವು ಭಾಗಗಳಲ್ಲಿ ಮೇಲ್ದರ್ಜೆಗೇರಿಸುವ ಬಾಕಿ ಉಳಿದ ಷಟ್ಪಥ ರಸ್ತೆಯ ಕಾಮಗಾರಿಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಿ ವಾಹನ ಸವಾರರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸುವಂತೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಕರೆಯಲಾಗಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರಕ್ಕೆ ಹೊಂದಿಕೊಂಡ ಹಾಗೂ ಕುಂದುವಾಡ ಬ್ರಿಡ್ಜ್, ಅಗಸನಕಟ್ಟೆ ಬಳಿಯ ಸರ್ವೀಸ್ ರಸ್ತೆ ಬಾಕಿ ಉಳಿದಿದ್ದು, ಈ ಭಾಗದಲ್ಲಿ ಅಪಘಾತಗಳು ಹೆಚ್ಚು ಸಂಭವಿಸುತ್ತಿವೆ. ಆದ್ದರಿಂದ ಆದಷ್ಟು ಬೇಗ ಕಾಮಗಾರಿ ಮುಕ್ತಾಯ ಮಾಡುವಂತೆ ಹೇಳಿದರು.

ಕಾನೂನು ಪ್ರಕಾರ ರೈತರಿಗೆ (4ನೇ ಪುಟಕ್ಕೆ)


Narayana Health — Gastro Care

ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಆಸ್ಪತ್ರೆಯ ಸರ್ಜಿಕಲ್ ಗ್ಯಾಸ್ಟ್ರೋ ತಜ್ಞ ವೈದ್ಯರು ಈಗ ದಾವಣಗೆರೆಯಲ್ಲಿ

ಸಾಮಾನ್ಯ ಲಕ್ಷಣಗಳು : ಗ್ಯಾಸ್ಟ್ರಿಕ್ ಸಮಸ್ಯೆ | ಹೊಟ್ಟೆ ನೋವು | ಅಪೆಂಡಿಕ್ಸ್ | ಪಿತ್ತಕೋಶದಲ್ಲಿ ಕಲ್ಲು | ಹರ್ನಿಯ ಮೂಲವ್ಯಾಧಿ | ಫಿಸ್ಟೂಲ | ಮಲಬದ್ಧತೆ | ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆ

ಡಾ. ಸತೀಶ್ ಕುಮಾರ್ ಬಿ ಎಂ - ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ & ಲಿವರ್ ಟ್ರಾನ್ಸ್‌ಪ್ಲಾಂಟ್



6ನೇ ಸೆಪ್ಟೆಂಬರ್ 2024 (ಶುಕ್ರವಾರ) | ಮಧ್ಯಾಹ್ನ 12:00 ರಿಂದ 3:00 ರವರೆಗೆ

ಯುನಿಟಿ ಹೆಲ್ತ್ ಸೆಂಟರ್, ಸೈಂಟ್ ಪಾಲ್ಸ್ ಕಾನ್ವೆಂಟ್ ರಸ್ತೆ, 5ನೇ ತಿರುವು, ದಾವಣಗೆರೆ

ಸಹ್ಯಾದ್ರಿ ನಾರಾಯಣ ಆಸ್ಪತ್ರೆ, ಎನ್‌ಟಿ ರಸ್ತೆ, ಹರಕೆರೆ, ಶಿವಮೊಗ್ಗ | Take Care | 88844 31388, 73494 48215


## ಹಿರೇಗೌಡ್ರ ಬಸಪ್ಪ ನಿಧನ



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಡಗ್ಗಿ ಬಸಾಪುರ ಗ್ರಾಮದ ವಾಸಿ

**ಹಿರೇಗೌಡ್ರ ಬಸಪ್ಪ (80)**

ಇವರು ದಿನಾಂಕ 03.09.2024ರ ಮಂಗಳವಾರ ರಾತ್ರಿ 7.56ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 4.9.2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಉಚ್ಚಂಗಿ ದುರ್ಗದ ಹತ್ತಿರ ಡಗ್ಗಿ ಬಸಾಪುರದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : ಪತ್ನಿ : ಹಿರೇಗೌಡ್ರ ಹಾಲಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಹಿರೇಗೌಡ್ರ ವಂಶಸ್ಥರು ಹಾಗೂ ಡಗ್ಗಿ ಬಸಾಪುರದ ಗ್ರಾಮಸ್ಥರು. ಮೊ : 94499 41057

## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಹೇಮಾವತಿ (ಹನುಮಕ್ಕ)**

(ಶ್ರೀ ಜಿ.ಡಿ. ಕೊಟಗಿಮನಿ ಇವರ ಧರ್ಮಪತ್ನಿ)


ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು...
ನಿಮ್ಮ ಸವಿ ನೆನಪು ನಮ್ಮ ಮನದಲ್ಲಿ ಸದಾ ನಲಿದಾಡುತ್ತಿದೆ
ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಅನುಗ್ರಹಿಸಲಿ
ಎಂದು ಪ್ರಾರ್ಥಿಸುತ್ತಾ ಅನುದಿನವೂ ನಿಮ್ಮನ್ನು ಸ್ಮರಿಸುವವರು...

ಶ್ರೀ ಜಿ.ಡಿ. ಕೊಟಗಿಮನಿ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು.

ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದಿನಾಂಕ : 04.09.2024ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ದಾವಣಗೆರೆ ನಗರದ ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ನಿವಾಸದಲ್ಲಿ ಹಮ್ಮಿಕೊಳ್ಳಲಾಗಿದೆ.

## 'ನುಡಿ ನಮನ' ಕಾರ್ಯಕ್ರಮಕ್ಕೆ ಆಹ್ವಾನ



ದಿನಾಂಕ : 14.08.2024 ರಂದು ಲಿಂಗೈಕ್ಯರಾದ

**ಪ್ರೊ|| ಎಸ್.ಬಿ. ರಂಗನಾಥ್ ಸಿದ್ಧನಮಠ**

ಅವರಿಗೆ 'ನುಡಿ ನಮನ'

05.09.2024ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪ ಅನುಭವ ಮಂಟಪ ಆವರಣ, ಹದಡಿ ರಸ್ತೆ, ದಾವಣಗೆರೆ.

ದಿವ್ಯ ಸಮ್ಮುಖ :


ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ
ಶ್ರೀ ತರಳಬಾಳು ಜಗದ್ಗುರು ಶ್ರೀ 1108
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.

ತಮ್ಮ ಆಗಮನವನ್ನು ಬಯಸುವವರು :

ಶ್ರೀಮತಿ ರತ್ನಮ್ಮ ರಂಗನಾಥ್ ಮತ್ತು ಕುಟುಂಬದವರು
ತರಳಬಾಳು ಬಡಾವಣೆ, ದಾವಣಗೆರೆ.
ಹಾಗೂ ಸಿದ್ಧನಮಠದ ಸಮಸ್ತ ಗ್ರಾಮಸ್ಥರು.


TRUSTWELL HOSPITALS — Your Trust. Our Care

ಲಿವರ್ ಟ್ರಾನ್ಸ್‌ಪ್ಲಾಂಟ್ ಕ್ಲಿನಿಕ್



ಯಾರು ಪಾಲ್ಗೊಳ್ಳಬೇಕು?
- ಕಾಮಾಲೆ • ಕಿಬ್ಬೊಟ್ಟೆಯ ಹಿಗ್ಗುವಿಕೆ
- ಸಾಮಾನ್ಯ ತುರಿಕೆ
- ಹೆಪಟೈಟಿಸ್ ಬಿ ಮತ್ತು ಸಿ
- ಮದ್ಯಪಾನ ವ್ಯಸನ ಕಾಯಿಲೆ
- ಲಿವರ್ ಕ್ಯಾನ್ಸರ್ • ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್
- ಮತ್ತು ಪ್ಯಾಂಕ್ರಿಯಾಟೈಟಿಸ್

5ನೇ ಸೆಪ್ಟೆಂಬರ್ 2024 – ಗುರುವಾರ

| ಬೆಳಗ್ಗೆ 12 ರಿಂದ 1 ರವರೆಗೆ | ಮಧ್ಯಾಹ್ನ 2 ರಿಂದ 3 ರವರೆಗೆ |
| --- | --- |
| ಮಧ್ಯಾಹ್ನ 12 ರಿಂದ 1 ರವರೆಗೆ<br>ಸಿಟಿ ಸೆಂಟ್ರಲ್ ಆಸ್ಪತ್ರೆ<br>#17, ಎ ವಿ ಕೆ ಕಾಲೇಜು ರಸ್ತೆ,<br>ಪಿ ಜೆ ವಿಸ್ತರಣೆ, ದಾವಣಗೆರೆ–577004 | ಮಧ್ಯಾಹ್ನ 2 ರಿಂದ 3 ರವರೆಗೆ<br>ಯುನಿಟಿ ಹೆಲ್ತ್ ಸೆಂಟರ್<br>5ನೇ ಮುಖ್ಯ, ಜೈನ್ ಶಾಲೆ ಎದುರು,<br>ಕೆ ಎ ವಿಸ್ತರಣೆ, ದಾವಣಗೆರೆ – 577002 |

ಡಾ. ಸುನಿಲ್ ಶೆಣ್ವೆ
ಎಂ.ಎಸ್ (ಜನರಲ್ ಸರ್ಜರಿ) ಎಂ.ಸಿ.ಹೆಚ್ (ಜಿ.ಐ ಮತ್ತು ಎಚ್.ಪಿ.ಬಿ ಸರ್ಜರಿ)
(ಎಕ್ಸ್) ಕ್ಲಿನಿಕಲ್ ಅಸಿಸ್ಟೆಂಟ್ ಪ್ರೊಫೆಸರ್, ಮೆಡಿಕಲ್ ಯೂನಿವರ್ಸಿಟಿ ಆಫ್ ಸೌತ್ ಕೆರೊಲಿನಾ, ಯು.ಎಸ್.ಎ ಬಹು ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ – ತಜ್ಞರು

ನೇಮಕಾತಿಗಾಗಿ : ☎ 7676797676

ನಂ. 5, ಜೆ ಸಿ ರಸ್ತೆ, ಸುಧಾಮ ನಗರ, ಬೆಂಗಳೂರು, ಕರ್ನಾಟಕ 560002

# ನಟ ದರ್ಶನ್ ಪ್ರಕರಣ : ಗಣೇಶ ಹಬ್ಬಕ್ಕೆ ಮುನ್ನವೇ ಚಾರ್ಜ್‌ಶೀಟ್ ಸಲ್ಲಿಕೆ

**ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಪ್ರಕರಣದ ತನಿಖೆ ಬಹುತೇಕ ಪೂರ್ಣ**



ಬೆಂಗಳೂರು, ಸೆ. 3 - ಗಣೇಶ ಚತುರ್ಥಿಗೂ ಮುನ್ನವೇ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಆರೋಪಿ ಚಿತ್ರ ನಟ ದರ್ಶನ್ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆಯಾಗಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಪ್ರಕರಣದ ತನಿಖೆ ಬಹುತೇಕ ಪೂರ್ಣಗೊಂಡಿದೆ. ದರ್ಶನ್ ಹಾಗೂ ಅವರ ಸಹಚರರ ವಿರುದ್ಧ ನ್ಯಾಯಾಲಯಕ್ಕೆ ಪ್ರಾಥಮಿಕ ಹಂತದ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದರು.

ಈ ಮಧ್ಯೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್, ಮೃತ ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ಪೂರ್ಣಗೊಂಡಿದ್ದು, ಸಿದ್ಧಪಡಿಸಿರುವ ಚಾರ್ಜ್‌ಶೀಟ್ ಅನ್ನು ಅಡ್ವೋಕೇಟ್ ಜನರಲ್ ಅವರ ಸಲಹೆಗೆ ಕಳುಹಿಸಲಾಗಿತ್ತು. ಅವರು ಕೆಲವು ಮಾರ್ಪಾಡುಗಳಿಗೆ ಸಲಹೆ ಮಾಡಿದ್ದಾರೆ, ಅದರ ಪರಿಷ್ಕರಣೆ ನಂತರ ಒಂದೆರಡು ದಿನಗಳಲ್ಲೇ ನ್ಯಾಯಾಲಯಕ್ಕೆ ಸಲ್ಲಿಸುತ್ತೇವೆ ಎಂದು ಹೇಳಿದರು.

ಕೊಲೆ ಆರೋಪಿ ದರ್ಶನ್ ಸೇರಿದಂತೆ, ಇತರರನ್ನು ಬಂಧಿಸಿ ಮೂರು ತಿಂಗಳಾಗುತ್ತಿದೆ. ನಾವು 90 ದಿನಗಳ ಮುನ್ನವೇ ಚಾರ್ಜ್‌ಶೀಟ್ ಸಲ್ಲಿಸಬೇಕಿದೆ ಎಂದು ಮಾಹಿತಿ ನೀಡಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆ ಸಂಗ್ರಹಿಸಿದ್ದೇವೆ. ಬೆಂಗಳೂರಿನ ವಿಧಿ ವಿಜ್ಞಾನ ವರದಿ ಬಂದಿದೆ, ಹೈದರಾಬಾದ್ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬರಬೇಕಿದೆ. ನಮಗೆ ದೊರೆತಿರುವ ವರದಿಯನ್ನೇ ದಾಖಲೆಗೆ ಸೇರಿಸಿ ನ್ಯಾಯಾಲಯಕ್ಕೆ ಪ್ರಾಥಮಿಕ ಆರೋಪ ಪಟ್ಟಿ ಜೊತೆ ಸಲ್ಲಿಸುತ್ತೇವೆ, ಹೈದರಾಬಾದ್ ವರದಿ ಬಂದ ನಂತರ ಪೂರಕ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದರು.

ಕಳೆದ ಜೂನ್ 9ರಂದು ರೇಣುಕಸ್ವಾಮಿ ಹತ್ಯೆಯಾಗಿತ್ತು, ಕೊಲೆಗೆ ಸಂಬಂಧಿಸಿದಂತೆ ದರ್ಶನ್ ಸೇರಿದಂತೆ, ಇತರರನ್ನು 11ರಂದು ವಶಕ್ಕೆ ಪಡೆಯಲಾಗಿತ್ತು.

ಘಟನೆ ಸಮಯದಲ್ಲಿ ಆರು ಮಂದಿ ಆರೋಪಿಗಳು ಧರಿಸಿದ್ದ ಬಟ್ಟೆ, ಪಾದರಕ್ಷೆ ಹಾಗೂ ಚರ್ಮದ ವಸ್ತುಗಳು, ಅವರುಗಳ ಬಂಧನದ ನಂತರ ಅವರ ಮನೆಗಳಿಂದ ವಶ ಪಡಿಸಿಕೊಳ್ಳಲಾದ ವಸ್ತುಗಳೂ ಸೇರಿದಂತೆ 200ಕ್ಕೂ ಹೆಚ್ಚು ಸಾಕ್ಷ್ಯಗಳನ್ನು ತನಿಖಾಧಿಕಾರಿಗಳು ಸಂಗ್ರಹಿಸಿದ್ದಾರೆ.

ರೇಣುಕಸ್ವಾಮಿ ತೀವ್ರತರ ಗಾಯ, ಆಘಾತ ಮತ್ತು ರಕ್ತಸ್ರಾವದಿಂದ ಸಾವನ್ನಪ್ಪಿರುವುದು ಮರಣೋತ್ತರ ಪರೀಕ್ಷಾ ವರದಿಯಿಂದ ದೃಢಪಟ್ಟಿದೆ.

ಇದಾದ ನಂತರ ಪೋಲಿಸರು ಕಾನೂನು ತಜ್ಞರ ಸಲಹೆ ಪಡೆದು ಸವಿಸ್ತಾರವಾದ ಚಾರ್ಜ್‌ಶೀಟ್ ಸಿದ್ಧಪಡಿಸಿದ್ದು, ಯಾವುದೇ ಸಮಯದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದರು.

# ಯಾವ ಧರ್ಮದವರ ಭಾವನೆಗಳಿಗೂ ಧಕ್ಕೆ ಬಾರದಂತೆ ಹಬ್ಬ ಆಚರಿಸಿ : ಶಾಸಕ ಹರೀಶ್



ಹರಿಹರ, ಸೆ.3- ಯಾವುದೇ ಧರ್ಮದವರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಬಾರದಂತೆ ಬರಲಿರುವ ಹಬ್ಬಗಳನ್ನು ಸಂಭ್ರಮದಿಂದ ಆಚರಿಸುವಂತೆ ಶಾಸಕ ಬಿ.ಪಿ. ಹರೀಶ್ ಕರೆ ನೀಡಿದರು.

ನಗರದ ಪೊಲೀಸ್ ಠಾಣೆ ಆವರಣದಲ್ಲಿ ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬದ ಅಂಗವಾಗಿ ಕರೆಯಲಾಗಿದ್ದ ಶಾಂತಿ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪ್ರತಿ ವರ್ಷವೂ ಗಣೇಶ ಚತುರ್ಥಿ, ಈದ್ ಮಿಲಾದ್ ಹಾಗೂ ಆರೋಗ್ಯ ಮಾತೆ ಹಬ್ಬಗಳು ಜೊತೆಗೇ ಬರುತ್ತವೆ. ಆಚರಣೆಗಳು, ಪದ್ಧತಿಗಳು ಭಿನ್ನವಾಗಿದ್ದರೂ ಇಲ್ಲಿಯವರೆಗೆ ಎಲ್ಲರೂ ಸಹಾನುಭೂತಿಯಿಂದ ಹಬ್ಬ ಆಚರಿಸಿಕೊಂಡು ಬಂದಿದ್ದೀರಿ. ಮುಂದೆಯೂ ಎಲ್ಲರೂ ಒಗ್ಗೂಡಿ ಹಬ್ಬ ಆಚರಿಸುವಂತಾಗಲಿ ಎಂದು ಆಶಿಸಿದರು.

ಗಣೇಶನ ವಿಸರ್ಜನೆ ಮೆರವಣಿಗೆ ಸಮಯವನ್ನು ರಾತ್ರಿ 9.30 ರವರೆಗೆ ವಿಸ್ತರಿಸುವಂತೆಯೂ, ಗಣೇಶ ಪ್ರತಿಷ್ಠಾಪನೆಗೆ ಅನುಮತಿ ಶುಲ್ಕ ಕಡಿಮೆ ಮಾಡುವಂತೆಯೂ ಹಾಗೂ ಒಂದೇ ಕಡೆ ಅನುಮತಿ ಪತ್ರ ಸಿಗುವಂತೆ ಮಾಡಬೇಕಿದೆ ಎಂದು ಅಧಿಕಾರಿಗಳಿಗೆ ಹೇಳಿದ ಶಾಸಕರು, ವೃದ್ಧರಿಗೆ, ಅನಾರೋಗ್ಯ ಪೀಡಿತರಿಗೆ ತೊಂದರೆಯಾಗದಂತೆ ಡಿಜೆ ಸದ್ದು ಕಡಿಮೆ ಇಟ್ಟುಕೊಂಡು ಮೆರವಣಿಗೆ ಮಾಡುವಂತೆ ಸಂಘಟಕರಿಗೆ ಸಲಹೆ ನೀಡಿದರು.

ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ಜಿ. ಎಸ್. ಬಸವರಾಜ್ ಮಾತನಾಡಿ, ನಿಬಂಧನೆಗಳನ್ನು ಪಾಲಿಸಬೇಕು. ಬಂಟಿಂಗ್ಸ್, ಬ್ಯಾನರ್, ಬಾವುಟ ಕಟ್ಟುವಾಗ ಮತ್ತೊಂದು ವರ್ಗದವರಿಗೆ ತೊಂದರೆ ಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ತಹಶೀಲ್ದಾರ್ ಗುರುಬಸವರಾಜ್ ಮಾತನಾಡಿ, ಕಾನೂನು ಚೌಕಟ್ಟಿನಲ್ಲಿ ಹಬ್ಬ ಆಚರಿಸಿದಾಗ ಹಿರಿಯರಿಗೆ ಗೌರವ ನೀಡಿದಂತಾಗುತ್ತದೆ ಎಂದರು.

ಸಿಪಿಐ ದೇವಾನಂದ್ ಮಾತನಾಡಿ, ನಗರದಲ್ಲಿ 56 ಕಡೆ ಗಣೇಶನನ್ನು ಪ್ರತಿಷ್ಠಾಪಿಸಲಾಗುತ್ತದೆ. ಕಡ್ಡಾಯವಾಗಿ ಅನುಮತಿ ಪತ್ರ ಪಡೆಯಬೇಕು ಎಂದು ಹೇಳಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ಹಬ್ಬದ ವೇಳೆ ಸ್ವಚ್ಛತೆಗೆ ಆದ್ಯತೆ ನೀಡಲಾಗುತ್ತದೆ. ಪುರಸಭೆಯಿಂದ ನದಿಯ ಬಳಿ ಒಂದೇ ಸ್ಥಳದಲ್ಲಿ ಗಣೇಶ ವಿಸರ್ಜನೆಗೆ ಸ್ಥಳ ನಿಗದಿ ಪಡಿಸಲಾಗುತ್ತದೆ ಎಂದರು.

ಅಂಜುಮಾನ್ ಇಸ್ಲಾಮಿಯಾ ಸಂಸ್ಥೆಯ ಅಧ್ಯಕ್ಷ ಏಜಾಜ್ ಆಹ್ಮದ್ ಮಾತನಾಡಿ, ಈದ್ ಮಿಲಾದ್ ಹಬ್ಬವನ್ನು ಬಹುತೇಕ ಇದೇ ದಿನಾಂಕ 16ರಂದು ಆಚರಿಸಲಾಗುತ್ತದೆ. ಈ ವೇಳೆ ಮೆರವಣಿಗೆಯಲ್ಲಿ ಯಾವುದೇ ಡಿಜೆ ಇರುವುದಿಲ್ಲ ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿಜಯ ಸಂತೋಷ್ ಅಧ್ಯಕ್ಷತೆ ವಹಿಸಿದ್ದರು.

ಸಿಪಿಐ ಸುರೇಶ್ ಸರಗಿ, ಎಸ್ ದೇವಾನಂದ್, ಪಿಎಸ್‌ಐಗಳಾದ ಶ್ರೀಪತಿ ಗಿನ್ನಿ, ಮಂಜುನಾಥ್ ಕುಪ್ಪೇಲೂರು, ಪ್ರಭು ಕೆಳಗಿನ ಮನೆ, ಸಿದ್ದೇಶ್, ವಿಜಯಕುಮಾರ್ ಎಎಸ್‌ಐಗಳಾದ ರಾಜಶೇಖರ್, ಮನಸೂರ್, ಬೆಸ್ಕಾಂ ಎಇಇ ಮಾರ್ಕಂಡೇಯ, ಅಗ್ನಿಶಾಮಕ ದಳದ ಸಂಜೀವ್ ಕುಮಾರ್, ಆರೋಗ್ಯ ಇಲಾಖೆಯ ಸಂತೋಷ್, ರವಿಕುಮಾರ್, ವಿ.ಎ. ಹೇಮಂತ್ ಕುಮಾರ್, ನಗರಸಭೆ ಸದಸ್ಯ ಎ.ಬಿ. ವಿಜಯಕುಮಾರ್, ಹಿಂದೂ ಜಾಗರಣ ವೇದಿಕೆಯ ದಿನೇಶ್, ಶಿವು, ಮಂಜುನಾಥ್, ಅಂಜುಮಾನ್ ಇಸ್ಲಾಮಿಯಾ ಕಾರ್ಯದರ್ಶಿ ಆಸೀಫ್ ಜುನೇದಿ, ಫೈಯಾಜ್, ಹೆಚ್. ಕೆ. ಕೊಟ್ರಪ್ಪ, ಹೆಚ್.ಸುಧಾಕರ, ಮಲ್ಲೇಶಪ್ಪ, ಶ್ರೀನಿವಾಸ್ ಕೊಡ್ಲಿ, ಅಶೋಕ, ಯುವರಾಜ್, ಪರಶುರಾಮ್, ಸಿದ್ದೇಶ್, ಹನುಮಂತ್, ಶಾರುಖ್, ಶಾಹಿದ್, ನಜೀರ್, ಪೊಲೀಸ್ ಸಿಬ್ಬಂದಿಗಳಾದ ರವಿಕುಮಾರ್, ನಿಂಗರಾಜ್, ಕರಿಯಪ್ಪ, ಕವಿತಾ, ರಾಧಾಕೃಷ್ಣ, ರಾಜೀವ್ ಇತರರು ಹಾಜರಿದ್ದರು.

## ಚಿಣ್ಣರ ರಾಧೆ, ಕೃಷ್ಣರ ವೇಷಭೂಷಣ ಸ್ಪರ್ಧೆ : ವಿಜೇತರಿಗೆ ಬಹುಮಾನ



**ಲಯನ್ಸ್ ಕ್ಲಬ್‌ನಲ್ಲಿ ಮಕ್ಕಳ ಸಂಭ್ರಮ**

ದಾವಣಗೆರೆ, ಸೆ.3- ಲಯನ್ಸ್ ಕ್ಲಬ್ ಮತ್ತು ಜ್ಞಾನ ಸೌರಭ ಎಜುಕೇಶನ್ ಟ್ರಸ್ಟಿನ ಸಹಯೋಗದಲ್ಲಿ ಇಲ್ಲಿನ ಲಯನ್ಸ್ ಭವನದಲ್ಲಿ ಕೃಷ್ಣ ಜನ್ಮಾಷ್ಟಮಿಯ ನಿಮಿತ್ತ ಚಿಣ್ಣರ ಕೃಷ್ಣ, ರಾಧೆಯ ವೇಷಭೂಷಣ ಸ್ಪರ್ಧೆ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಲಯನ್ಸ್ ಛೇರ್ಮನ್ ಎಸ್. ವೆಂಕಟಾಚಲಂ ಅವರು, ಜೀವನದಲ್ಲಿ ಶ್ರೀಕೃಷ್ಣನ ಆದರ್ಶ ಮತ್ತು ತತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಲಯನ್ಸ್ ಕ್ಲಬ್ ಉಪಾಧ್ಯಕ್ಷ ಮಹಾಂತೇಶ್ ಒಣರೊಟ್ಟಿ, ಕಾರ್ಯದರ್ಶಿ ಸಿ.ಅಜಯ್ ನಾರಾಯಣ್, ಖಜಾಂಚಿ ಎಸ್. ನಾಗರಾಜ್, ಬಸವರಾಜಪ್ಪ, ವಾಸುದೇವ ರಾಯ್ಕರ್, ಜ್ಞಾನ ಸೌರಭ ಎಜುಕೇಶನ್ ಟ್ರಸ್ಟಿನ ಅಧ್ಯಕ್ಷ ಮಹೇಶ್ವರಪ್ಪ, ಪುಷ್ಪಾ ಮಹೇಶ್ವರಪ್ಪ, ಲಯನ್ಸ್ ಶಾಲೆಯ ಮುಖ್ಯ ಶಿಕ್ಷಕಿ ಪಾವನಾ, ಮಂಜುಳಾ ಇದ್ದರು.



## ಸ್ವಚ್ಛತೆಗೆ ಆದ್ಯತೆ ನೀಡಲು ಅಧಿಕಾರಿಗಳಿಗೆ ನಗರಸಭೆ ಅಧ್ಯಕ್ಷೆ ಕವಿತಾ ಸೂಚನೆ

ಹರಿಹರ, ಸೆ.3- ನಗರದ ಹಳೆ ಪಿ.ಬಿ. ರಸ್ತೆ, ಆಸ್ಪತ್ರೆ ರಸ್ತೆ ಸೇರಿದಂತೆ ವಿವಿಧ ಸ್ಥಳಗಳಿಗೆ ಇಂದು ಬೆಳಿಗ್ಗೆ ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಜಂಬಣ್ಣ ಗುತ್ತೂರು ಅವರು ಭೇಟಿ ಕೊಟ್ಟು ರಸ್ತೆಯಲ್ಲಿ ಬಿದ್ದಿರುವ ಕಸವನ್ನು ನಗರಸಭೆಯ ವಾಹನಗಳನ್ನು ಸ್ಥಳಕ್ಕೆ ಕರೆಸಿ ಸಾಗಿಸಲು ಮುಂದಾದರು.

ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಮಾತನಾಡಿ, ನಗರದ ಆಸ್ಪತ್ರೆ ರಸ್ತೆ ಬಹಳಷ್ಟು ಹಾಳಾಗಿದ್ದು, ಇದರಿಂದಾಗಿ ಆಸ್ಪತ್ರೆಗೆ ರೋಗಿಗಳು ಓಡಾಡುವುದಕ್ಕೆ ಪರದಾಡುವಂತೆ ಆಗಿದೆ. ಆದಷ್ಟು ಬೇಗನೇ ರಸ್ತೆ ದುರಸ್ತಿ ಪಡಿಸುವಂತೆ ಮತ್ತು ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡುವಂತೆ ಸೂಚಿಸಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ಆರೋಗ್ಯ ಇಲಾಖೆಯ ಸಂತೋಷ, ರವಿಪ್ರಕಾಶ್, ನಗರಸಭೆ ಪೌರ ಕಾರ್ಮಿಕರು ಹಾಜರಿದ್ದರು.

## ಹೊನ್ನಾಳಿ ಪ್ರಶಾಂತ್ ಬಣ್ಣಜ್ಜಿ ಆಯ್ಕೆ



ಹೊನ್ನಾಳಿ, ಸೆ. 3 - ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಹೊನ್ನಾಳಿಯ ಹೆಚ್ ಬಿ. ಪ್ರಶಾಂತ್ ಬಣ್ಣಜ್ಜಿ ಅವರನ್ನು ಆಯ್ಕೆ ಮಾಡಿರುವುದಾಗಿ ಸಮಿತಿಯ ರಾಜ್ಯಾಧ್ಯಕ್ಷ ಎಸ್. ಮಧು ಬಂಗಾರಪ್ಪ ತಿಳಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ವೀರಭದ್ರೇಶ್ವರ ಜಯಂತ್ಯೋತ್ಸವ





ಮಲೇಬೆನ್ನೂರು, ಸೆ.3- ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಶ್ರೀ ವೀರಭದ್ರೇಶ್ವರ ದೇವರ ಉದ್ಭವ ಮಹೋತ್ಸವದ (ಜಯಂತ್ಯೋತ್ಸವ) ಅಂಗವಾಗಿ ಗುಗ್ಗಳ ಮತ್ತು ವೀರಗಾಸೆ ಶ್ರದ್ಧಾ-ಭಕ್ತಿಯಿಂದ ನಡೆದವು.

ಬೆಳಿಗ್ಗೆ ಪಟ್ಟಣದ ಬಸವೇಶ್ವರ ದೇವಸ್ಥಾನದಿಂದ ವೀರಭದ್ರೇಶ್ವರ ದೇವಸ್ಥಾನದವರೆಗೂ ಗುಗ್ಗಳ ವಿವಿಧ ವಾದ್ಯಗಳೊಂದಿಗೆ ಸಾಗಿ ಬಂದಿತು. ನಂತರ ದೇವಸ್ಥಾನದಲ್ಲಿ ಕಣ್ವಕುಪ್ಪಿ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು, ಇಷ್ಟಲಿಂಗ ಪೂಜೆ ನೆರವೇರಿಸಿದರು.


ಈ ವೇಳೆ ಆಶೀರ್ವಚನ ನೀಡಿದ ಶ್ರೀಗಳು, ವೀರಭದ್ರೇಶ್ವರ ದೇವರ ಅವತಾರಗಳ ಬಗ್ಗೆ ವಿವರಿಸಿ, ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಮತ್ತು ದುಷ್ಟ ಶಕ್ತಿಗಳನ್ನು ಸದೆ ಬಡಿಯುವ ವೀರಭದ್ರೇಶ್ವರ ದೇವರು ಮಲೇಬೆನ್ನೂರಿನಲ್ಲಿ ನೆಲೆ ನಿಂತಿರುವುದು ಈ ಭಾಗದ ಜನರ ಪುಣ್ಯ ಎಂದರು.

ನಂತರ ಶ್ರೀಗಳು ಶ್ರೀ ವೀರಭದ್ರೇಶ್ವರ ದೇವರಿಗೆ, ಭದ್ರಕಾಳಿಗೆ, ಮಹಾಗಣಪತಿಗೆ, ನಾಗಪರಿವಾರ ಹಾಗೂ ಕ್ಷೇತ್ರ ರಕ್ಷಕ ಕಾಲ ಭೈರವನಿಗೆ ವಿಶೇಷ ಪೂಜೆ ಸಲ್ಲಿಸಿದರು.

ದೇವಸ್ಥಾನದ ಪ್ರಧಾನ ಅರ್ಚಕ ಬೆನಕಯ್ಯ ಶಾಸ್ತ್ರಿಗಳ ನೇತೃತ್ವದಲ್ಲಿ ವೀರಭದ್ರೇಶ್ವರ ಜಯಂತ್ಯೋತ್ಸವದ ಪೂಜಾ ಕಾರ್ಯಕ್ರಮಗಳು ಜರುಗಿದವು.

ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಬಿ.ಪಂಚಪ್ಪ, ಉಪಾಧ್ಯಕ್ಷ ಚಿ.ಚಿದಾನಂದಪ್ಪ, ಬಿ.ನಾಗೇಂದ್ರಪ್ಪ, ಖಜಾಂಚಿ ಬಿ.ವಿ.ರುದ್ರೇಶ್, ಎನ್.ಕೆ.ಬಸವರಾಜ್, ಬಿ.ಶಂಭುಲಿಂಗಪ್ಪ, ಬಿ.ನಾಗೇಶ್, ಬಿ.ಮಲ್ಲಿಕಾರ್ಜುನ್, ಬಿ.ಎನ್. ವೀರೇಶ್, ಬಿ.ಎಂ.ಹರ್ಷ, ಬಿ.ಸಿ.ಸತೀಶ್, ಎಸ್. ಎನ್.ಶಂಭುಲಿಂಗಪ್ಪ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.


## ಎಂಟನೇ ವರ್ಷದ ಪುಣ್ಯಸ್ಮರಣೆ



ಜನನ : 31.08.1976 ಮರಣ : 04.09.2016


ಮನವೆಂಬ ಮಂದಿರದಲ್ಲಿ ಕನಸೆಂಬ ಸಾಗರದ ನೆನಪೆಂಬ ಅಲೆಗಳಲ್ಲಿ ಚಿರಕಾಲ ಮಿನುಗುತ್ತಿರುವ

**ಶ್ರೀ ಚಿಕ್ಕನಳ್ಳೇರ ಎಸ್. ನಟರಾಜ್**

ನೀವು ನಮ್ಮನ್ನು ಅಗಲಿ ಎಂಟು ವರ್ಷಗಳಾದವು. ಸದಾ ನಿಮ್ಮ ನೆನಪಿನಲ್ಲಿ ಜೀವನ ನಡೆಸುತ್ತಿರುವ,

ಶ್ರೀಮತಿ ಸುನಂದಮ್ಮ ಹೆಚ್.ಜಿ. ಶಿವಮೂರ್ತೆಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು ಮೃತರ ಧರ್ಮಪತ್ನಿ ಶ್ರೀಮತಿ ಹೆಚ್.ಎನ್. ರೂಪಾ, ಮಕ್ಕಳಾದ : ನಿಶ್ಚಿತಾ ಎನ್. ಮತ್ತು ಮಾನಸಿ ಎನ್. ಹಾಗೂ ಚಿಕ್ಕನಳ್ಳೇರ ವಂಶಸ್ಥರು, ಹೆಚ್. ಕಲಪನಹಳ್ಳಿ.


## ಶಾಮನೂರಿನ ಬೆಳ್ಳೂಡಿ ಹನುಮಂತಪ್ಪ ನಿಧನ




ದಾವಣಗೆರೆ ಸಿಟಿ ಶಾಮನೂರು ಅಂಬೇಡ್ಕರ್ ಬಡಾವಣೆ ವಾಸಿ ಬೆಳ್ಳೂಡಿ ಹನುಮಂತಪ್ಪ (62) ಅವರು ದಿನಾಂಕ 03.09.2024ರ ಮಂಗಳವಾರ ಸಂಜೆ 5.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.09.2024ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ನಗರಕ್ಕೆ ಇಂದು ಮೂಳೆ ವೈದ್ಯರ ಭೇಟಿ

ರಾಮನಗರ ಜಿಲ್ಲೆಯ ಕುದೂರಿನ ಪಾರಂಪರಿಕ ಮೂಳೆ ವೈದ್ಯ ಮಹದೇವಯ್ಯ ಇಂದು ನಗರಕ್ಕೆ ಆಗಮಿಸಲಿದ್ದು, ನಿಟುವಳ್ಳಿಯ ಪತಂಜಲಿ ವೆಲ್‌ನೆಸ್ ಸೆಂಟರ್‌ನಲ್ಲಿ ಮಧ್ಯಾಹ್ನ 1 ಗಂಟೆಗೆ ಚಿಕಿತ್ಸೆ ನೀಡಲಿದ್ದಾರೆ.

ವೈದ್ಯ ಮಹದೇವಯ್ಯ, ಮೂಳೆ ಮುರಿತ, ಟೆನಿಸ್ ಎಲ್ಬೋ, ಸೊಂಟ ನೋವು, ಕುತ್ತಿಗೆ ನೋವು, ಭುಜ ನೋವು ಮುಂತಾದ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಲಭ್ಯವಿರುತ್ತಾರೆ ಎಂದು ಕೆ.ಎಂ. ಪುಷ್ಪಲತಾ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9743895325, 83107 48946, 9880107918.


## 14ನೇ ವರ್ಷದ ಪುಣ್ಯಸ್ಮರಣೆ



**ದಿ॥ ಸಣ್ಣಗೌಡ್ರ ದ್ಯಾಮಪ್ಪನವರು**

ಶಾಮನೂರು

ನಿಧನ : 04.09.2010

ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶ್ರೀಮತಿ ಎಸ್.ಜಿ.ಲಕ್ಕಮ್ಮ ಸಣ್ಣಗೌಡ್ರ ದ್ಯಾಮಪ್ಪ
ಶ್ರೀಮತಿ ಪುಷ್ಪ ಉಮೇಶ್ ಮತ್ತು ಶ್ರೀ ಬಿ. ಉಮೇಶ್
ಶ್ರೀ ಉಲ್ಲಾಸ್ ಬಿ. ಯು., ಡಾ॥ ಉಜ್ವಲ ಬಿ.ಯು.,
ಶ್ರೀ ಹರ್ಷ ಬಿ.ಯು. ಹಾಗೂ ಬಂಧು-ಮಿತ್ರರು.


## ನಿವೃತ್ತ ಶಿಕ್ಷಕ ಹೆಚ್.ಎಂ. ಚನ್ನಯ್ಯ ನಿಧನ



ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ಗ್ರಾಮದ ವಾಸಿ **ಹೆಚ್.ಎಂ. ಚನ್ನಯ್ಯ** (90) ಇವರು ದಿನಾಂಕ 03.09.2024ರ ಮಂಗಳವಾರ ರಾತ್ರಿ 10.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು 4.9.2024ರ ಬುಧವಾರ ಮಧ್ಯಾಹ್ನ 12ಕ್ಕೆ ಹಿರೇತೊಗಲೇರಿ ಗ್ರಾಮದ ಮಠದ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ಹಿರೇತೊಗಲೇರಿ ಮಠದ ವಂಶಸ್ಥರು ಮತ್ತು ಮಕ್ಕಳು, ಮೊಮ್ಮಕ್ಕಳು.**


## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಜನನ : 03-03-1980 ಮರಣ : 04-09-2022

**ದಿ॥ ಶ್ರೀಮತಿ ಶಿಲ್ಪಾ**

ನೀನು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಸದಾ ನಿನ್ನ ಸ್ಮರಣೆಯಲ್ಲಿರುವ...

✦ ಪತಿ : ಟಿ.ಕೆ. ಗುರುಬಸವರಾಜ್ ✦ ಪುತ್ರ : ಅತೀಶ್‌ರಾಜ್
✦ ಮಾವ : ಟಿ. ಕೊಟ್ರೇಶ್, ತೆರಿಗೆ ಸಲಹೆಗಾರರು
✦ ಟಿ.ಕೆ. ನಾಗರಾಜ್ ✦ ಟಿ.ಎನ್. ನೇತ್ರ ✦ ಟಿ.ಎನ್. ಕವನ
✦ ಟಿ.ಕೆ. ಮೋಹನ್ ✦ ಟಿ.ಎಂ. ಶಾಂಭವಿ
✦ ಟಿ.ಎಂ. ಸಾನ್ವಿ ✦ ಟಿ.ಎಂ. ರೋನಕ್ ಹಾಗೂ ಬಂಧು ಮಿತ್ರರು.


# ಪ್ರಭಾರಿ ಮುಖ್ಯ ಶಿಕ್ಷಕ ಅರುಣ್‌ಕುಮಾರ್ ಅವರಿಗೆ ರಾಜ್ಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ



ಹರಿಹರ, ಸೆ.3 - ಹರಿಹರ ತಾಲ್ಲೂಕಿನ ಹಿಂಡಸಘಟ್ಟ ಗ್ರಾಮದ ಕ್ಯಾಂಪಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಅರುಣ್ ಕುಮಾರ್ ಅವರಿಗೆ ರಾಜ್ಯದ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ಲಭಿಸಿದೆ.

ಕೇವಲ ಶಿಕ್ಷರಾಗಿ ಮಕ್ಕಳಿಗೆ ಪಾಠ ಮಾಡುವುದಷ್ಟೇ ಅಲ್ಲದೇ, ಗುಣಮಟ್ಟದ ಶಿಕ್ಷಣ ಸಿಗುವ ನಿಟ್ಟಿನಲ್ಲಿ ಸುಮಾರು 10 ರಿಂದ 12 ಹಳ್ಳಿಗಳಲ್ಲಿ ಇರುವ ಪ್ರಮುಖ ವ್ಯಕ್ತಿಗಳಿಂದ 15 ಲಕ್ಷ ರೂ. ಹಣವನ್ನು ಸಂಗ್ರಹಿಸಿ, 55 ಇಂಚಿನ ಟಿವಿ, 40 ಸಾವಿರ ಮೊತ್ತದ ಲ್ಯಾಪ್‌ಟಾಪ್, ಪೇಂಟಿಂಗ್, ಗೋಡೆ ಬರಹ, ಅರ್ಚ್, ನರೇಗಾ ಯೋಜನೆಯಿಂದಾಗಿ 6.5 ಲಕ್ಷ ರೂ. ವೆಚ್ಚದಲ್ಲಿ 700 ಅಡಿ ಶಾಲೆ ಕಾಂಪೌಂಡ್ ನಿರ್ಮಾಣ, ಜೊತೆಗೆ 1 ರಿಂದ 5 ತರಗತಿಯ ಮಕ್ಕಳಿಗೆ ಪುಸ್ತಕ ಬರೆದಿದ್ದು, ನಲಿ-ಕಲಿ ಪಠ್ಯಪುಸ್ತಕದ ಮೂಲಕ ಮಕ್ಕಳಿಗೆ ಶಿಕ್ಷಣದ ಮಹತ್ವವನ್ನು ತಿಳಿಸುವಲ್ಲಿ ಅರುಣ್ ಕುಮಾರ್ ಸದಾ ಮುಂದಾಗಿರುತ್ತಾರೆ.

ಅರುಣ್ ಕುಮಾರ್ ಅವರಿಗೆ ಕಳೆದ ಸಾಲಿನ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿತ್ತು. ಬೆಂಗಳೂರಿನ ಜ್ಞಾನ - ವಿಜ್ಞಾನ ಸಮಿತಿಯ 'ಅನಿತ ಕವಲು' ಪ್ರಶಸ್ತಿ ಪಡೆದಿದ್ದಾರೆ. 'ಶಿಕ್ಷಕ ರತ್ನ' ಪ್ರಶಸ್ತಿಯನ್ನು ಅವರು ಪಡೆದಿದ್ದಾರೆ. ಅವರು ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ 25 ವಿದ್ಯಾರ್ಥಿಗಳು ಮಾತ್ರ ಶಿಕ್ಷಣ ಪಡೆಯುತ್ತಿದ್ದು, ಅದರಲ್ಲಿ ಶೇ.70 ರಷ್ಟು ಲಂಬಾಣಿ ಜನಾಂಗದವರು ಮತ್ತು ಶೇ. 30 ರಷ್ಟು ಭೋವಿ ಜನಾಂಗದ ವಿದ್ಯಾರ್ಥಿಗಳು ಓದುತ್ತಿದ್ದಾರೆ.

ನನಗೆ ರಾಜ್ಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿರುವುದು ಜವಾಬ್ದಾರಿ ಹೆಚ್ಚಾಗಿದೆ. ಮಕ್ಕಳಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣದ ಸವಲತ್ತುಗಳನ್ನು ದೊರಕಿಸಿವ ನಿಟ್ಟಿನಲ್ಲಿ ಹೆಚ್ಚು ತೊಡಗಿಸಿಕೊಂಡು, ಶಾಲೆಯನ್ನು ರಾಜ್ಯಕ್ಕೆ ಮಾದರಿ ಶಾಲೆಯನ್ನಾಗಿ ಮಾಡುವ ನಿಟ್ಟಿನಲ್ಲಿ ಸೇವೆ ಮಾಡುವುದಾಗಿ ಅರುಣ್ ಕುಮಾರ್ ತಿಳಿಸಿದ್ದಾರೆ.

# ಕಾನೂನು ಸುವ್ಯವಸ್ಥೆಯೂ ನಾಗರಿಕ ಹಕ್ಕು

**(1ನೇ ಪುಟದಿಂದ)** ದೀರ್ಘಾವಧಿಯವರೆಗೆ ನೆರವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ತನಿಖೆಯಲ್ಲಿ ಕೌಶಲ್ಯ ಹೆಚ್ಚಿಸಿಕೊಂಡರೆ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣವೂ ಹೆಚ್ಚಾಗುತ್ತದೆ. ತನಿಖೆ ವೈಜ್ಞಾನಿಕವಾಗಿರಬೇಕು ಹಾಗೂ ತನಿಖಾ ವರದಿಯಲ್ಲಿ ಗೊಂದಲಕ್ಕೆ ಅವಕಾಶ ಇರಬಾರದು ಎಂದು ಹೇಳಿದರು.

ಸಂತ್ರಸ್ತರಿಗೆ ನ್ಯಾಯ ಒದಗಿಸುವುದೂ ಸಹ ಸಾಮಾಜಿಕ ನ್ಯಾಯದ ಭಾಗವಾಗಿದೆ. ಈ ರೀತಿಯ ನ್ಯಾಯ ಒದಗಿಸುವುದೇ ತನಿಖೆಯ ಉದ್ದೇಶ ಆಗಿರಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪೊಲೀಸ್ ಕರ್ತವ್ಯ ಕೂಟದ ನೋಡಲ್ ಅಧಿಕಾರಿ ಹಾಗೂ ಡಿವೈಎಸ್‌ಪಿ ಎ.ಕೆ. ರುದ್ರೇಶ್, ವಲಯ ಮಟ್ಟದಲ್ಲಿ ಉತ್ತಮ ಸಾಧನೆ ತೋರಿದವರನ್ನು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಕಳಿಸಲಾಗುವುದು ಎಂದು ಹೇಳಿದರು.

ಸಮಾರಂಭದ ವೇದಿಕೆಯ ಮೇಲೆ ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ ಎಂ. ಸಂತೋಷ್, ಜಿ. ಮಂಜುನಾಥ್ ಹಾಗೂ ಆರ್‌ಎಫ್‌ಎಸ್‌ಎಲ್ ಉಪ ನಿರ್ದೇಶಕಿ ಛಾಯಾ ಕುಮಾರಿ ಉಪಸ್ಥಿತರಿದ್ದರು.

ಮಲ್ಲಿಕಾರ್ಜುನ್ ಶಾನಬೋಗ್ ಪ್ರಾರ್ಥಿಸಿದರು. ಸಿಪಿಸಿಗಳಾದ ಸಂಗೇನಹಳ್ಳಿ ದೇವರಾಜ ಹಾಗೂ ಹೆಚ್. ಎಸ್. ಸಿದ್ದಾರ್ಥ ನಿರೂಪಿಸಿದರೆ, ಪೊಲೀಸ್ ಉಪಾಧೀಕ್ಷಕ ಪಿ.ಬಿ. ಪ್ರಕಾಶ್ ವಂದಿಸಿದರು.

### ಕಂತೆ ಕಡತಗಳಿಗಿಂತ ವಿಡಿಯೋ ಪರಿಣಾಮಕಾರಿ

ಡಿಜಿಟಲ್ ಸಾಕ್ಷಿಗಳನ್ನು ಈಗ ಪ್ರಾಥಮಿಕ ಸಾಕ್ಷಿಗಳೆಂದು ಪರಿಗಣಿಸಲಾಗುತ್ತಿದೆ. ಪೊಲೀಸರು ಹಾಗೂ ಆರೋಪಿಗಳ ಹೇಳಿಕೆಗಳಿಗಿಂತ ಡಿಜಿಟಲ್ ಸಾಕ್ಷಿಗಳು ಹೆಚ್ಚು ಪರಿಣಾಮಕಾರಿಯಾಗಿವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಹೇಳಿದರು.

ಕಂತೆ ಕಡತಗಳಿಗಿಂತ ವಿಡಿಯೋ ಸಾಕ್ಷಿಗಳು ಹೆಚ್ಚು ಪರಿಣಾಮಕಾರಿಯಾಗುತ್ತವೆ. ಆದರೂ, ಕೆಲವೊಮ್ಮೆ ಸಿ.ಸಿ.ಟಿ.ವಿ. ಸಾಕ್ಷಿಗಳನ್ನು ಕಡೆಗಣಿಸುವುದು ಕಂಡು ಬರುತ್ತದೆ. ಆ ರೀತಿ ಆಗಬಾರದು ಎಂದರು. ಮೊಬೈಲ್ ಮೂಲಕ ತೆಗೆಯುವ ಚಿತ್ರ ಹಾಗೂ ವಿಡಿಯೋಗಳೂ ಮಹತ್ವದ ಸಾಕ್ಷಿಗಳಾಗುತ್ತವೆ. ಹೀಗಾಗಿ ಡಿಜಿಟಲ್ ಸಾಕ್ಷಿಗಳನ್ನು ಸಂಗ್ರಹಿಸುವ ಕೌಶಲ್ಯ ಹೆಚ್ಚಿಸಿಕೊಳ್ಳಬೇಕು ಎಂದರು.

### ಜಿಲ್ಲೆಯಲ್ಲಿ 32 ಕೋಟಿ ರೂ.ಗಳ ಸೈಬರ್ ವಂಚನೆ

ಸೈಬರ್ ಅಪರಾಧಗಳ ಸಂಖ್ಯೆ ಈಗ ಹೆಚ್ಚಾಗುತ್ತಿದೆ. ಜಿಲ್ಲೆಯಲ್ಲಿ 32 ಕೋಟಿ ರೂ.ಗಳ ಸೈಬರ್ ವಂಚನೆಯಾಗಿದೆ ಎಂದು ಎಸ್ಪಿ ಉಮಾ ಪ್ರಶಾಂತ್ ತಿಳಿಸಿದರು. ಈ ಹಿನ್ನೆಲೆಯಲ್ಲಿ ಪೊಲೀಸರು ಸೈಬರ್ ಅಪರಾಧಗಳ ಬಗ್ಗೆ ಹೆಚ್ಚು ತಿಳುವಳಿಕೆ ಹೊಂದಬೇಕು. ಎ.ಐ. ತಂತ್ರಜ್ಞಾನ ಮೊಬೈಲ್‌ಗಳಲ್ಲೂ ಲಭ್ಯವಿದ್ದು, ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

### ಐದು ವಿಭಾಗಗಳಲ್ಲಿ ಸ್ಪರ್ಧೆ

ಪೂರ್ವ ವಲಯ ಪೊಲೀಸ್ ಕರ್ತವ್ಯ ಕೂಟದಲ್ಲಿ ಎರಡು ದಿನಗಳ ಕಾಲ ಐದು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ದಾವಣಗೆರೆ, ಚಿತ್ರದುರ್ಗ, ಹಾವೇರಿ ಹಾಗೂ ಶಿವಮೊಗ್ಗ ಜಿಲ್ಲೆಗಳ ಪೊಲೀಸರು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ವಿಧಿ ವಿಜ್ಞಾನ, ಕಂಪ್ಯೂಟರ್ ತಿಳುವಳಿಕೆ, ಶ್ವಾನ ದಳ, ಫೋಟೋ - ವಿಡಿಯೋ ಹಾಗೂ ಬಾಂಬ್ ಪತ್ತೆ - ನಿಷ್ಕ್ರಿಯ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

## ರಷ್ಯಾದಲ್ಲಿ ಹೆಚ್ಚಿನ ಲಾಭ ಗಳಿಸಿದ್ದಾಗಿ ಹೇಳುತ್ತಿದ್ದ ಕಂಪನಿ ಹಠಾತ್ತನೆ ಮಾಯ

ನವದೆಹಲಿ, ಸೆ. 3 - ರಷ್ಯಾದ ಮುಂಚೂಣಿ ಕಂಪನಿಗಳಿಗಿಂತಲೂ ಹೆಚ್ಚಿನ ಪ್ರಮಾಣದ ಲಾಭ ಗಳಿಸಿದ್ದಾಗಿ ಹೇಳುತ್ತಿದ್ದ ಅಲ್ಲಿನ ಕಂಪನಿಯೊಂದು ಹಠಾತ್ತನೆ ಮಾಯವಾಗಿದೆ ಎಂದು ಅಲ್ಲಿನ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ರಷ್ಯಾದ ಬ್ಯಾಂಕ್‌ನೋಟ ಎಂಬ ಕಂಪನಿಯು 37.1 ಶತಕೋಟಿ ಡಾಲರ್ ಲಾಭ ಗಳಿಸಿದ್ದಾಗಿ ಹೇಳಿಕೊಂಡಿತ್ತು. ಇದು ರಷ್ಯಾದ ಸರ್ಕಾರಿ ಸ್ವಾಮ್ಯದ ಇಂಧನ ಕಂಪನಿಗಳಾದ ರಾಸ್‌ನೆಫ್ಟ್ ಹಾಗೂ ಗಾಜಪ್ರಾಮ್ ಹೊರತುಪಡಿಸಿದರೆ ಉಳಿದೆಲ್ಲ ಕಂಪನಿಗಳ ಲಾಭಕ್ಕಿಂತ ಹೆಚ್ಚಾಗಿತ್ತು.

ಬ್ಯಾಂಕ್‌ನೋಟ ನಿರ್ವಹಿಸುತ್ತಿದ್ದ ವೆಬ್‌ಸೈಟ್ ಈಗ ಕಾರ್ಯನಿರ್ವಹಿಸುತ್ತಿಲ್ಲ. ಜೂನ್ 2023ರಲ್ಲಿ ಬ್ಯಾಂಕ್‌ನೋಟ ಕಂಪನಿಯು ಇತರೆ ನಾಲ್ಕು ಉದ್ಯಮಗಳ ಜೊತೆ ಆರಂಭವಾಗಿತ್ತು ಎಂದು ಕಂಪನಿಯ ವೆಬ್ ತಾಣದಲ್ಲಿ ತಿಳಿಸಲಾಗಿತ್ತು. ಆದರೆ, ವಾಸ್ತವಿಕವಾಗಿ ಕಂಪನಿ ಹೇಳಿದ ವಿಳಾಸದಲ್ಲಿ ಯಾವುದೇ ಸಂಸ್ಥೆ ಇರಲಿಲ್ಲ. ಈ ಪ್ರಮಾಣದ ಲಾಭ ಗಳಿಸಲು ಸಾಧ್ಯವಿಲ್ಲ ಎಂದು ಆರ್ಥಿಕ ಪರಿಣಿತರು ಹೇಳಿದ್ದಾರೆ. ಬ್ಯಾಂಕ್‌ನೋಟ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸುವಂತಿಲ್ಲ. ಈ ಸಂಸ್ಥೆಯು ಕಣ್ಮರೆಯಾಗುವ ಮುಂಚೆ ತನ್ನ ಹಣವನ್ನು ದೇಶದ ಹೊರಕ್ಕೆ ರವಾನಿಸಿರಬಹುದು ಎಂದು ಹೇಳಲಾಗುತ್ತದೆ.

# ನೀಲಮ್ಮ ಮಾಗಾನಹಳ್ಳಿ ಅವರಿಗೆ ಪ್ರೊ.ವಿಮಲದಾಸ್ ಸೇವಾ ಪುರಸ್ಕಾರ

## ನೊಂದವರ ಕಣ್ಣೀರು ಒರೆಸುವ ಮನೋಭಾವ ಹೊಂದಿದ್ದ ವಿಮಲದಾಸ್ : ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ



ದಾವಣಗೆರೆ, ಸೆ. 3- ಜೀವನದಲ್ಲಿ ಶಿಸ್ತು, ಶ್ರದ್ಧೆ, ಕಾಯಕ ಪ್ರಜ್ಞೆಯನ್ನು ಮೂಡಿಸುವ ಜೊತೆಗೆ ಆದರ್ಶಪ್ರಾಯರಾಗಿ ಬದುಕಿದವರು ಪ್ರೊ. ವಿಮಲದಾಸ್. ನನ್ನನ್ನೂ ಸೇರಿದಂತೆ ಅನೇಕರಿಗೆ ಬೆಂಬಲವಾಗಿ ನಿಂತು ಕೆಲಸ ಕಲಿಸಿಕೊಟ್ಟ ದಿಟ್ಟ ಮಹಿಳೆ ಎಂದು ದಾವಣಗೆರೆ ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ ಪ್ರಶಂಸಿಸಿದರು.

ನಗರದ ಜಾಗೃತ ಮಹಿಳಾ ಸಂಸ್ಥೆ ಸಭಾಂಗಣದಲ್ಲಿ ಪ್ರೊ. ವಿಮಲದಾಸ್ ಜನ್ಮ ದಿನದ ಅಂಗವಾಗಿ ನಿನ್ನೆ ಹಮ್ಮಿಕೊಂಡಿದ್ದ 'ಪ್ರೊ. ವಿಮಲದಾಸ್ ಸೇವಾ ಪುರಸ್ಕಾರ' ಪ್ರದಾನ ಸಮಾ ರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿಮಲ ಅವರು ಎವಿಕೆ ಕಾಲೇಜಿನಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿಯಾದವರು. ಕಾಲೇಜಿನ ಒಳಗೆ ಬರುತ್ತಿದ್ದಾರೆಂಬ ಸುಳಿವು ಸಿಕ್ಕರೆ ಸಾಕು ಸಿಬ್ಬಂದಿ ಭಯ ಪಡುತ್ತಿದ್ದರು. ತಪ್ಪು ಯಾರದೇ ಇರಲಿ ಅವರನ್ನು ಖಂಡಿಸುವ ನೇರ ನುಡಿಯ ಗುಣ ಅವರಲ್ಲಿತ್ತು ಎಂದರು.

ಇಡೀ ಬಾಪೂಜಿ ವಿದ್ಯಾಸಂಸ್ಥೆಯಲ್ಲಿ ನಂ.1 ಪ್ರಾಂಶುಪಾಲರಾಗಿದ್ದರು. ದಕ್ಷ, ಪ್ರಾಮಾಣಿಕ, ಪಾರದರ್ಶಕ ಆಡಳಿತ ನಡೆಸುತ್ತಿದ್ದ ವಿಮಲದಾಸ್ ಅವರ ವ್ಯಕ್ತಿತ್ವ ಮಾದರಿಯಾಗುವಂತಿತ್ತು. ಮಹಿಳೆಯ ಬಗ್ಗೆ ಅವರಿಗಿದ್ದ ಕಾಳಜಿ, ನೊಂದವರ ಕಣ್ಣೀರು ಒರೆಸುವ ಮನೋಭಾವ ಹೊಂದಿದ್ದರು. ಅವರ ಸೇವಾ ಕಾರ್ಯಗಳು ಇತರರಿಗೆ ಪ್ರೇರಣೆ ನೀಡುತ್ತಿದ್ದವು ಎಂದು ಹೇಳಿದರು. ವಿಮಲದಾಸ್ ಅವರ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿರುವ ಜಾಗೃತ ಮಹಿಳಾ ಸಂಸ್ಥೆ ಅವರ ಕಾರ್ಯ ಶ್ಲಾಘನೀಯ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ್ ಕುರ್ಕಿ ಮಾತನಾಡಿ, ನನ್ನ ವೃತ್ತಿ ಬದುಕಿಗೆ ಅಡಿಪಾಯ ಹಾಕಿದವರು ವಿಮಲದಾಸ್. ಅವರು ಕಾಲೇಜಿನ ಒಳಾಂಗಣಕ್ಕೆ ಬರುತ್ತಿದ್ದಂತೆಯೇ ಕಾಲೇಜಿನ ಕಿಟಕಿ, ಬಾಗಿಲುಗಳು ಸಹ ಅಲರ್ಟ್ ಆಗಿರುತ್ತಿದ್ದವು. ಅವರ ಮೇಲೆ ಅಷ್ಟೊಂದು ಭಯ-ಭಕ್ತಿ ಇತ್ತು ಎಂದರು.

ಕಾಲೇಜು ಪ್ರವೇಶಿಸಿದ ತಕ್ಷಣ ಅವರು ತಮ್ಮ ಪ್ರಾಚಾರ್ಯರ ಕೊಠಡಿಗೆ ಹೋಗುತ್ತಿರಲಿಲ್ಲ. ಬದಲಾಗಿ ಅವರು ಅಧ್ಯಾಪಕೇತರ ಸಿಬ್ಬಂದಿ ಕಾರ್ಯಗಳನ್ನು, ತರಗತಿಗಳಲ್ಲಿನ ಪಾಠಗಳನ್ನು ಪರಿಶೀಲಿಸಿದ ನಂತರವೇ ತಮ್ಮ ಕೊಠಡಿಗೆ ತೆರಳುತ್ತಿದ್ದರು.

ಏಜು ಏಶಿಯಾ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ನೀಲಮ್ಮ ಮಾಗಾನಹಳ್ಳಿ ಅವರಿಗೆ ಜಾಗೃತ ಮಹಿಳಾ ಸಂಸ್ಥೆಯ ವತಿಯಿಂದ 'ಪ್ರೊ. ವಿಮಲದಾಸ್ ಸೇವಾ ಪುರಸ್ಕಾರ' ನೀಡಿ ಗೌರವಿಸಲಾಯಿತು.

ಜಾಗೃತ ಮಹಿಳಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಶಾಂತಮ್ಮ ದಿಳ್ಳೆಪ್ಪ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಆಶಾ ಕಲ್ಲನಗೌಡ, ಪದಾಧಿಕಾರಿಗಳಾದ ಸತ್ಯಭಾಮ ಮಂಜುನಾಥ್, ಅಮೀರಾಬಾನು, ಟಿ. ಹೇಮಲತಾ, ಕೆ.ಬಿ. ಸುಮ ಮತ್ತಿತರರು ಉಪಸ್ಥಿತರಿದ್ದರು.

# ಜಿಲ್ಲಾಡಳಿತ ವಿಧಿಸಿರುವ ನಿಯಮಗಳನ್ನು ಪಾಲಿಸಿ, ಪರಿಸರ ಸ್ನೇಹಿ ಗಣೇಶನ ಪ್ರತಿಷ್ಠಾಪಿಸಿ

### ಮಲೇಬೆನ್ನೂರಿನ ಶಾಂತಿ ಸಭೆಯಲ್ಲಿ ಉಪ ತಹಶೀಲ್ದಾರ್ ಆರ್.ರವಿ ಮನವಿ



ಮಲೇಬೆನ್ನೂರು, ಸೆ.3- ಎಲ್ಲಾ ಕಡೆಗಳಲ್ಲಿ ಪರಿಸರ ಸ್ನೇಹಿ ಗಣಪತಿ ಪ್ರತಿಷ್ಠಾಪಿಸಿ ಎಂದು ಉಪ ತಹಶೀಲ್ದಾರ್ ಆರ್.ರವಿ ಮನವಿ ಮಾಡಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಇಂದು ಸಂಜೆ ಹಮ್ಮಿಕೊಂಡಿದ್ದ ಗಣೇಶ ಹಬ್ಬ ಮತ್ತು ಈದ್ ಮಿಲಾದ್ ಹಬ್ಬದ ಶಾಂತಿ ಸೌಹಾರ್ದ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಗಣೇಶೋತ್ಸವ ಸಮಿತಿಯವರು ಗಣಪತಿ ಮೂರ್ತಿ ರಕ್ಷಣೆಗೆ ಸ್ವಯಂ ಸೇವಕರನ್ನು ನಿಯೋಜಿಸಿಕೊಳ್ಳಬೇಕು. ಬೆಂಕಿ, ಬೆಳಕಿನಿಂದ ರಕ್ಷಿಸಿಕೊಳ್ಳಲು ಮತ್ತು ಶಾಂತಿ ಕಾಪಾಡಲು ಗಮನ ಹರಿಸಿ, ಜಿಲ್ಲಾಡಳಿತ ವಿಧಿಸಿರುವ ನಿಯಮ ಪಾಲಿಸಿ ಎಂದು ರವಿ ತಿಳಿಸಿದರು.

ಪಿಎಸ್‌ಐ ಪ್ರಭು ಡಿ.ಕೆಳಗಿನಮನಿ ಮಾತನಾಡಿ, ಗಣೇಶೋತ್ಸವ - ಈದ್ ಮಿಲಾದ್ ಹಬ್ಬದ ವೇಳೆ ಶಾಂತಿ, ಸಾಮರಸ್ಯ ಕಾಪಾಡುವಂತೆ ಹಿಂದೂ - ಮುಸ್ಲಿಂ ಸಮುದಾಯದ ಜನತೆಗೆ ಕೋರಿದರು.

ಗಣೇಶನ ಪ್ರತಿಷ್ಠಾಪಿಸುವ ದಿನದಿಂದ ವಿಸರ್ಜನೆ ತನಕ ಜವಾಬ್ದಾರಿಯುತ ಸ್ವಯಂ ಸೇವಕರನ್ನು ನಿಯೋಜಿಸಿ ಹಾಗೂ ಅವರು ಹೆಸರು ವಿಳಾಸ, ದೂರವಾಣಿ ಸಂಖ್ಯೆಯನ್ನು ಪೊಲೀಸರಿಗೆ ನೀಡಬೇಕು.

ಫ್ಲೆಕ್ಸ್, ಬ್ಯಾನರ್ ಹಾಗೂ ಬಂಟಿಂಗ್ಸ್ ಅಳವಡಿಸುವವರು ಅವುಗಳ ರಕ್ಷಣೆ ವ್ಯವಸ್ಥೆ ಮಾಡಿಕೊಳ್ಳಬೇಕು ಹಾಗೂ ಹರಿದು ಹಾಕುವುದು, ಸಗಣಿ ಎರಚುವುದು, ವಿರೂಪಗೊಳಿಸುವ ಸಮಸ್ಯೆ ಎದುರಾಗದಂತೆ ಕಾಯುವ ವ್ಯವಸ್ಥೆ ಮಾಡಿಕೊಳ್ಳಬೇಕು. ಡಿಜೆ ಹಾಗೂ, ಬಾವುಟ, ಪಟಾಕಿ ಬಳಸಲು ಅನುಮತಿ ಇಲ್ಲ ಎಂದು ಪ್ರಭು ಹೇಳಿದರು.

ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ್ ಮಾತನಾಡಿ, ಪುರಸಭೆ ಕಛೇರಿಯಲ್ಲಿ ಹಬ್ಬಕ್ಕೆ ಅನುಮತಿ ನೀಡಲು ಫ್ಲೆಕ್ಸ್ ಪರವಾನಗಿ ನೀಡುವ ಉದ್ದೇಶದಿಂದ ಏಕ ಗವಾಕ್ಷಿ ತೆರೆಯಲಾಗಿದೆ. ಗಣೇಶ ವಿಸರ್ಜನೆಗೆ ಕರ್ನಾಟಕ ನೀರಾವರಿ ನಿಗಮದ ಕಛೇರಿ ಆವರಣದಲ್ಲಿರುವ ಹೊಂಡದಲ್ಲಿ ವ್ಯವಸ್ಥೆ ಮಾಡಿದ್ದು, ಅಲ್ಲಿ ವಿದ್ಯುತ್ ದೀಪ ಹಾಕಿಸಿ ರಾತ್ರಿ ವೇಳೆ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಪಟ್ಟಣದಲ್ಲಿ ಕುಡಿಯುವ ನೀರು, ಬೀದಿ ದೀಪ, ಸ್ವಚ್ಛತೆಗೆ ಒತ್ತು ನೀಡಲಾಗುವುದು, ಜನತೆ ಸಹಕರಿಸಿ ಸಾಮರಸ್ಯ ಕಾಪಾಡಿ ಎಂದರು.

ಪುರಸಭೆ ಸದಸ್ಯರಾದ ನಯಾಜ್, ಗೌಡ್ರ ಮಂಜಣ್ಣ, ಬಿ.ವೀರಯ್ಯ, ಮಾಜಿ ಸದಸ್ಯ ಭಾನುವಳ್ಳಿ ಸುರೇಶ್, ಕೊಕ್ಕನೂರಿನ ಅಭಿ ಪಾಟೀಲ್, ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ಅಶೋಕ್ ಯರೇಚಿಕ್ಕನಹಳ್ಳಿ ಅವರುಗಳು ಮಾತನಾಡಿದರು.

ಮುಸ್ಲಿಂ ಸಮಾಜದ ಮುಖಂಡ ಸೈಯದ್ ಜಾಕೀರ್ ಮಾತನಾಡಿ, ಈದ್ ಮಿಲಾದ್ ವೇಳೆ ಡಿಜೆ ಬಳಸುವುದಿಲ್ಲ. ಹಬ್ಬದ ವೇಳೆ ಶಾಂತಿ ಕಾಪಾಡುವ ಭರವಸೆ ನೀಡಿದರು.

ಪುರಸಭೆ ಸದಸ್ಯರಾದ ಟಿ.ಹನುಮಂತಪ್ಪ, ದಾದಾಪೀರ್, ಬಿ. ಮಂಜುನಾಥ್, ಪಿ.ಆರ್. ರಾಜು, ಓ.ಜಿ.ಕುಮಾರ್, ಬಿ.ಸೈಫುಲ್ಲಾ, ಎಕ್ಕೆಗೊಂದಿ ಕರಿಯಪ್ಪ, ಎ.ಕೆ.ಲೋಕೇಶ್, ದಾದಾವಲಿ, ಎಳೆಹೊಳೆ ಕುಮಾರ್, ನಂದಿಗುಡಿ ಶ್ರೀಕಾಂತ್, ಎಣ್ಣಿ ಕೃಷ್ಣಮೂರ್ತಿ, ಬೆಸ್ಕಾಂ ಸಿಬ್ಬಂದಿ ವೆಂಕಟೇಶ್, ಅಗ್ನಿಶಾಮಕ ದಳದ ಫೈರೋಜ್ ಖಾನ್, ಪುರಸಭೆಯ ನವೀನ್, ರೈತ ಸಂಘದ ಪ್ರಭುಗೌಡ ಮತ್ತು ಇತರರು ಸಭೆಯಲ್ಲಿದ್ದರು.

ಪೊಲೀಸ್ ಠಾಣೆ ಕಂಪ್ಯೂಟರ್ ಆಪರೇಟರ್ ಮಲ್ಲೇಶ್ ಸ್ವಾಗತಿಸಿದರು. ಎಎಸ್‌ಐ ಪಾಲಾಕ್ಷಪ್ಪ ವಂದಿಸಿದರು.

## ಬೆನಕನ ಅಮಾವಾಸ್ಯೆ : ಅಜ್ಜಯ್ಯನ ದರ್ಶನಕ್ಕೆ ಹರಿದು ಬಂದ ಭಕ್ತರು



ಮಲೇಬೆನ್ನೂರು, ಸೆ. 3- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಸೋಮವಾರ ಬೆನಕನ ಅಮಾವಾಸ್ಯೆ ಪ್ರಯುಕ್ತ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದರ್ಶನಕ್ಕೆ ಭಕ್ತರು ತುಂಗಭದ್ರಾ ನದಿ ನೀರಿನಂತೆ ಹರಿದು ಬಂದಿದ್ದರು.


ಅಜ್ಜಯ್ಯನ ದರ್ಶನಕ್ಕೆ ಬಂದ ಭಕ್ತರು ತುಂಗಭದ್ರಾ ನದಿಯ ಸ್ನಾನ ಘಟ್ಟದಲ್ಲಿ ಪುಣ್ಯ ಸ್ನಾನ ಮಾಡಿ ಉರುಳು ಸೇವೆ ಮಾಡಿ ಭಕ್ತಿ ಸಮರ್ಪಿಸಿದರು. ನಂತರ ಸ್ನಾನ ಘಟ್ಟದಲ್ಲಿ ಪ್ರತಿಷ್ಠಾಪಿತ ಗಣೇಶ ವಿಗ್ರಹಕ್ಕೆ ಪೂಜೆ ಸಲ್ಲಿಸಿದರು.

ಕೆಲವು ಭಕ್ತರು ತಲೆ ಮೇಲೆ ಅಜ್ಜಯ್ಯನ ಪೋಟೋ ಹೊತ್ತರೆ, ಇನ್ನೂ ಕೆಲವು ಭಕ್ತರು ತಲೆಮೇಲೆ ಕಲ್ಲು ಹೊತ್ತು ಹರಕೆ ಕಟ್ಟಿಕೊಳ್ಳುತ್ತಿರುವುದು ಕಂಡು ಬಂತು.

ಕಳಸ ಹೂಡಿ, ಹಣ್ಣು-ಕಾಯಿ, ನಿಂಬೆ ಹಣ್ಣು, ಕರ್ಪೂರ, ಉದ್ದಿನ ಕಡ್ಡಿ, ಅರಿಷಿಣ, ಚಂದನ ಹಚ್ಚಿ ಪೂಜೆ ಮಾಡಿ ಹರಕೆ ಕಟ್ಟಿಕೊಂಡರು.

ನಂತರ ಸರತಿ ಸಾಲಿನಲ್ಲಿ ಬಂದು ಅಜ್ಜಯ್ಯನ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಈ ಹಿಂದೆ ಕಟ್ಟಿಕೊಂಡು ತಮ್ಮ ಹರಕೆ ಈಡೇರಿದವರು ಹರಕೆ ತೀರಿಸಿದರು. ಶ್ರಾವಣ ಮಾಸದ ಕೊನೆಯ ಅಮಾವಾಸ್ಯೆಯಾದ ಬೆನಕನ ಅಮಾವಾಸ್ಯೆ ಅಂಗವಾಗಿ ಅಜ್ಜಯ್ಯನಿಗೆ ವಿಶೇಷ ಅಲಂಕಾರ, ಪೂಜೆ ಮತ್ತು ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಮಾಡಲಾಗಿತ್ತು. ಭಕ್ತರಿಗೆ ವಸತಿ ಹಾಗೂ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.

## ಹಾವೇರಿ ಜಿಲ್ಲೆಗೆ 34 ಖಬರಸ್ತಾನಗಳ ಅವಶ್ಯವಿದೆ



### ವಕ್ಫ ಜಿಲ್ಲಾಧ್ಯಕ್ಷ ನಾಸಿರ್ ಖಾನ್ ಪಠಾಣ್

ರಾಣೇಬೆನ್ನೂರು, ಸೆ.3- ಸಮಾಜದ ಒಳಿತಿಗೆ ಕೆಲ ಮುಸ್ಲಿಂ ಸಮಾಜದ ಮುಖಂಡರು ದಾನವಾಗಿ ನೀಡಿದ್ದ ಆಸ್ತಿಗಳು ವಕ್ಫ್ ಆಸ್ತಿಗಳಾಗಿವೆ. ಅವುಗಳನ್ನು ಕೆಲವರು ಅತಿಕ್ರಮಣ ಮಾಡಿಕೊಳ್ಳುತ್ತಿದ್ದಾರೆ. ಈ ಆಸ್ತಿ ರಕ್ಷಣೆಗೆ ನಿಷ್ಕ್ರಿಯಗೊಂಡಿರುವ ಟಾಸ್ಕ್ ಪೋರ್ಸ್‌ಗಳನ್ನು ಬಲಗೊಳಿಸುವ ಹಾಗೂ ಸಮಾಜ ಜನರ ಅಂತಿಮ ವಿದಿವಿಧಾನಗಳಿಗೆ ಹಾವೇರಿ ಜಿಲ್ಲೆಯ 34 ಕಡೆಗಳಲ್ಲಿ ಅವಶ್ಯವಿರುವ ಖಬರಸ್ತಾನಗಳ ಕುರಿತು ನಾಳೆ ದಿನಾಂಕ 3 ರಂದು ಹಾವೇರಿ ನಗರದಲ್ಲಿ ನಡೆಯುವ ವಕ್ಫ್ ಅದಾಲತ್‌ನಲ್ಲಿ ಚರ್ಚಿಸಲಾಗುವುದು ಎಂದು ಜಿಲ್ಲಾ ಸಲಹಾ ಸಮಿತಿ ಅಧ್ಯಕ್ಷ ನಾಸೀರ್ ಖಾನ್ ಪಠಾಣ್ ತಿಳಿಸಿದ್ದಾರೆ.

ಸಿದ್ದರಾಮೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕ 3 ರಂದು ವಕ್ಫ್ ಸಚಿವ ಜಮೀರ್ ಅಹ್ಮದ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಹಾವೇರಿ ಹಾಗೂ ಗದಗ ಜಿಲ್ಲೆಯ ಅದಾಲತ್ ಇದಾಗಿದ್ದು, ಹಾವೇರಿ ಜಿಲ್ಲೆಯೊಂದರಲ್ಲಿರುವ 5.633 ಎಕರೆ ಆಸ್ತಿಯಲ್ಲಿ 900 ಎಕರೆಯಷ್ಟು ಅತಿಕ್ರಮಣವಾಗಿದ್ದು ಈ ಕುರಿತು ಜೊತೆಗೆ, ಜಿಲ್ಲೆಯಲ್ಲಿರುವ 687 ಸಂಘಟನೆಯವರು ತಮ್ಮ ಗ್ರಾಮಗಳಲ್ಲಿರುವ ವ್ಯಾಜ್ಯಗಳ ಮಾಹಿತಿ ಸಲ್ಲಿಸಿದರೆ, ಅವುಗಳ ಕುರಿತು ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು ಎಂದು ಹೇಳಲಾಗಿದೆ.

ಈ ಮೊದಲು ಬೀದರ್‌ನಲ್ಲಿ ನಡೆದ ಅದಾಲತ್‌ನಲ್ಲಿ 387 ಅರ್ಜಿಗಳು ಸಲ್ಲಿಕೆಯಾಗಿದ್ದವು. ಅವುಗಳಲ್ಲಿ 290 ಅರ್ಜಿಗಳ ಬಗ್ಗೆ ಸ್ಥಳದಲ್ಲಿಯೇ ತೀರ್ಮಾನ ತೆಗೆದುಕೊಳ್ಳಲಾಯಿತು. ನಂತರ ನಡೆದ ಹುಬ್ಬಳ್ಳಿಯಲ್ಲಿನ ಅದಾಲತ್‌ನಲ್ಲೂ ಸಹ ಅರ್ಜಿಗಳ ವಿಲೇವಾರಿ ನಡೆಯಿತು. ಈಗ ಮೂರನೇಯ ಅದಾಲತ್ ಹಾವೇರಿಯಲ್ಲಿ ನಡೆಯಲಿದೆ. ಇಲ್ಲೂ ಸಹ ಸೂಕ್ತ ನಿರ್ಣಯಗಳಾಗಲಿವೆ ಎಂದು ಪಠಾಣ್ ಹೇಳಿದ್ದಾರೆ.

## ಅಟ್ಲಾಸ್ ಸೈಕಲ್ಸ್ ಮಾಜಿ ಅಧ್ಯಕ್ಷ ಸಲೀಲ್ ಕಪೂರ್ ಆತ್ಮಹತ್ಯೆ

ನವದೆಹಲಿ, ಸೆ. 3 - ಅಟ್ಲಾಸ್ ಸೈಕಲ್ಸ್ ಮಾಜಿ ಅಧ್ಯಕ್ಷ ಸಲೀಲ್ ಕಪೂರ್ ಅವರು ದೆಹಲಿಯ ತಮ್ಮ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅವರ ಮನೆಯಲ್ಲಿ ಮರಣ ಪತ್ರವೊಂದು ಪತ್ತೆಯಾಗಿದ್ದು, ಹಣಕಾಸು ಹೊರೆ ಮತ್ತು ನಾಲ್ವರ ಪೀಡನೆ ಕಾರಣದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಲಾಗಿದೆ. ಈ ಬಗ್ಗೆ ಎಲ್ಲಾ ದೃಷ್ಟಿಕೋನದಿಂದ ತನಿಖೆ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಸಲೀಲ್ ಕಪೂರ್ ಅವರು ತಲೆಗೆ ಗುಂಡು ಹಾರಿಸಿಕೊಂಡು ಸಾವನ್ನಪ್ಪಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಆ ವೇಳೆಗಾಗಲೇ ಸಾವು ಸಂಭವಿಸಿತ್ತು.

ಸಲೀಲ್ ಅವರ ನಾದಿನಿ ನತಾಶ ಕಪೂರ್ ಅವರು ಇದೇ ಮನೆಯಲ್ಲಿ ಜನವರಿ 2020ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಸಲೀಲ್ ಅವರ ಪತ್ನಿ ಹಾಗೂ ಮಕ್ಕಳು ಅವರ ಜೊತೆ ಇರಲಿಲ್ಲ. ಅನುಮತಿ ಹೊಂದಿದ್ದ ರಿವಾಲ್ವರ್‌ನಿಂದ ಸಲೀಲ್ ಕಪೂರ್ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ.

ನಾಲ್ವರು ತಮ್ಮನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಪೀಡಿಸಿದ್ದಾಗಿ ಮರಣ ಪತ್ರದಲ್ಲಿ ತಿಳಿಸಲಾಗಿದೆ. ಆದರೆ ತನಿಖೆ ನಡೆಯುತ್ತಿರುವ ಕಾರಣ ಇವರ ಹೆಸರು ಬಹಿರಂಗಪಡಿಸಲು ಪೊಲೀಸರು ನಿರಾಕರಿಸಿದ್ದಾರೆ.

9 ಕೋಟಿ ರೂ.ಗಳ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲೀಲ್ ಕಪೂರ್ ಅವರನ್ನು ದೆಹಲಿ ಪೊಲೀಸರ ಆರ್ಥಿಕ ಅಪರಾಧಗಳ ದಳ 2015ರಲ್ಲಿ ಬಂಧಿಸಿತ್ತು.

## ಅನ್ನ ದಾಸೋಹಕ್ಕೆ ಹೊನ್ನಾಳಿ ಪಂಚಮಸಾಲಿ ಸಮಾಜದಿಂದ 2.25 ಲಕ್ಷ ರೂ. ದೇಣಿಗೆ



ಹರಿಹರ, ಸೆ, 3-ನಗರದ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ನಡೆಯುವ ನಿತ್ಯ ಅನ್ನ ದಾಸೋಹಕ್ಕೆ ಹೊನ್ನಾಳಿ ಪಂಚಮಸಾಲಿ ಸಮಾಜದವರು 2 ಲಕ್ಷದ 25 ಸಾವಿರ ರೂ. ದೇಣಿಗೆಯ ಚೆಕ್ಕನ್ನು ದಾಸೋಹ ಸಮಿತಿಯ ಅಧ್ಯಕ್ಷ ಪ್ರಕಾಶ್ ಪಾಟೀಲ್, ಧರ್ಮದರ್ಶಿ ಬಿ.ಸಿ. ಉಮಾಪತಿ, ರಾಜ್ಯ ಪಂಚಮಸಾಲಿ ಸಮಾಜದ ನೂತನ ಅಧ್ಯಕ್ಷ ಸೋಮನಗೌಡ ಪಾಟೀಲ್, ಪ್ರಧಾನ ಕಾರ್ಯದರ್ಶಿ ಪರಮೇಶ್ವರ ಪಟ್ಟಣ್ಣಶೆಟ್ಟಿ ಅವರುಗಳು ಆಡಳಿತಾಧಿಕಾರಿ ಡಾ. ರಾಜಕುಮಾರ್ ಅವರಿಗೆ ನೀಡಿದರು.

ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ಮಾಜಿ ಅಧ್ಯಕ್ಷ ಬಸವರಾಜ್ ದಿಂಡೂರು, ಧರ್ಮದರ್ಶಿ ಚಂದ್ರಶೇಖರ್ ಪೂಜಾರ್, ಪಿ.ಡಿ. ಶಿರೂರು, ಹೊನ್ನಾಳಿ ಪಂಚಮಸಾಲಿ ಸಮಾಜದ ಅಧ್ಯಕ್ಷ ಹೆಚ್.ಪಿ. ವೀರಣ್ಣ, ಮಾಜಿ ಅಧ್ಯಕ್ಷ ಸೋಮಣ್ಣ ಕುಂಕೋದ್, ಅಶೋಕ, ಮೋಹನ್ ಇತರರು ಹಾಜರಿದ್ದರು.

## ಮಾನವ ರಹಿತ ಬಾಂಬರ್ ವಿಮಾನ ದೇಶೀಯವಾಗಿ ನಿರ್ಮಾಣ : ಎಫ್.ಡಬ್ಲ್ಯೂ.ಡಿ.ಎ.

ಬೆಂಗಳೂರು, ಸೆ. 3 – ಮಾನವ ರಹಿತ ಬಾಂಬರ್ ವಿಮಾನವನ್ನು ದೇಶೀಯವಾಗಿ ರೂಪಿಸಿರುವುದಾಗಿ ಬೆಂಗಳೂರಿನ ಫ್ಲೈಯಿಂಗ್ ವೆಡ್ಜ್ ಡಿಫೆನ್ಸ್ ಅಂಡ್ ಏರೋಸ್ಪೇಸ್ (ಎಫ್.ಡಬ್ಲ್ಯೂ.ಡಿ.ಎ.) ಘೋಷಿಸಿದೆ.

15 ಸಾವಿರ ಅಡಿಗಳ ಮಧ್ಯಮ ಎತ್ತರದಲ್ಲಿ ದೂರದವರೆಗೆ ಚಲಿಸುವ ಮಾನವ ರಹಿತ ವಿಮಾನ ರೂಪಿಸಲಾಗಿದೆ. ಇದು ಕ್ಷಿಪಣಿ ರೀತಿಯ ಶಸ್ತ್ರಗಳನ್ನು ಹೊತ್ತೊಯ್ಯಬಲ್ಲದು ಎಂದು ಎಫ್.ಡಬ್ಲ್ಯೂ.ಡಿ.ಎ. ಸ್ಥಾಪಕ ಹಾಗೂ ಸಿಇಒ ಸುಹಾಸ್ ತೇಜಸ್ಕಂದ ಹೇಳಿದ್ದಾರೆ.

ವಿಮಾನದ ವಿನ್ಯಾಸ, ಪ್ರಪಲ್ಷನ್ ಸಿಸ್ಟಂ, ನಿಯಂತ್ರಣ ವ್ಯವಸ್ಥೆ, ಎಲೆಕ್ಟ್ರಾನಿಕ್ಸ್ ಎಲ್ಲವನ್ನೂ ಭಾರತದಲ್ಲಿ ರೂಪಿಸಲಾಗಿದೆ. ಕಂಪನಿ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ 1.5 ಎಕರೆ ಜಾಗದಲ್ಲಿ ಸ್ಥಾಪಿತವಾಗಿದೆ ಎಂದು ತೇಜಸ್ಕಂದ ಹೇಳಿದ್ದಾರೆ. ಐದು ಮೀಟರ್ ಅಗಲದ ರೆಕ್ಕೆ ಹಾಗೂ 3.5 ಮೀಟರ್ ಉದ್ದವಿರುವ ಈ ಮಾನವ ರಹಿತ ವಿಮಾನ, 102 ಕೆ.ಜಿ. ತೂಕದ್ದಾಗಿದೆ ಹಾಗೂ 30 ಕಿ.ಲೋ. ತೂಕ ಹೊರಬಲ್ಲದು.

## ವಿಕಲಚೇತನ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ

ದಾವಣಗೆರೆ, ಸೆ. 3 - ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಮೆಟ್ರಿಕ್ ಪೂರ್ವ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿಕಲಚೇತನ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಸಹಾಯವಾಣಿ ಮತ್ತು ಮಾಹಿತಿ ಸಲಹಾ ಕೇಂದ್ರ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಚೇರಿ, ದೂ.ಸಂ 08192-263939 ಸಂಪರ್ಕಿಸ ಬಹುದು ಎಂದು ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ಹರಿಹರ : ಜಾನುವಾರುಗಳನ್ನು ಬಿಡಾಡಿ ಬಿಡದಂತೆ ಎಚ್ಚರಿಕೆ

ಹರಿಹರ, ಸೆ.3- ನಗರಸಭೆ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಹಸು, ಕರು ಹಾಗೂ ಎಮ್ಮೆಗಳನ್ನು ಬಿಡಾಡಿ ಬಿಡದಂತೆ ಜಾನುವಾರು ಮಾಲೀಕರಿಗೆ ನಗರ ಸಭೆ ಎಚ್ಚರಿಕೆ ನೀಡಿದೆ. ಜಾನುವಾರು ಮಾಲೀಕರು ಜಾಗೃತರಾಗದೇ ತಮ್ಮ ದನಗಳನ್ನು ಬಿಡಾಡಿ ಬಿಟ್ಟರೆ ಪೊಲೀಸರ ಸಹಾಯದಿಂದ ಗೋ ಶಾಲೆಗೆ ಸಾಗಿಸಲು ನಗರಸಭೆ ಕ್ರಮ ಕೈಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

# ಕಾಂಗೋ : ಜೈಲು ಪರಾರಿ ಯತ್ನದಲ್ಲಿ 129 ಸಾವು

ಕಿನ್ಷಾಸಾ, ಸೆ. 3 - ಕಾಂಗೋದ ಪ್ರಮುಖ ಜೈಲಿನಿಂದ ಪರಾರಿಯಾಗುವ ಯತ್ನದಲ್ಲಿ 129 ಜನ ಸಾವನ್ನಪ್ಪಿದ್ದಾರೆ. ಹಲವರು ಗುಂಡೇಟಿಗೆ ಸಿಲುಕಿ ಸಾವನ್ನಪ್ಪಿದ್ದರೆ, ಇನ್ನೂ ಹಲವರು ಕಾಲ್ತುಳಿತಕ್ಕೆ ಸಿಲುಕಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜಧಾನಿ ಕಿನ್ಷಾಸಾದಲ್ಲಿರುವ ಮಕಲಾ ಕೇಂದ್ರ ಜೈಲಿನ ಕೈದಿಗಳು ಪರಾರಿಯಾಗುವ ಯತ್ನ ನಡೆಸಿದ್ದರು. ಆಗ ಗುಂಡೇಟಿಗೆ ಸಿಲುಕಿ ಕನಿಷ್ಠ 24 ಜನ ಸಾವನ್ನಪ್ಪಿದ್ದಾರೆ. ಗಾಯಗೊಂಡ 59 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಕಾಂಗೋ ಗೃಹ ಸಚಿವ ಜೇಕಮಿನ್ ಶಬನಿ ತಿಳಿಸಿದ್ದಾರೆ.

ಮಕಲಾ ಕಾಂಗೋದ ಅತಿ ದೊಡ್ಡ ಜೈಲಾಗಿದೆ. ಇದು 1,500 ಜನರ ಸಾಮರ್ಥ್ಯ ಹೊಂದಿದೆ. ಆದರೆ ಇಲ್ಲಿ 12 ಸಾವಿರಕ್ಕೂ ಹೆಚ್ಚು ಬಂಧಿತರಿದ್ದಾರೆ. ಇವರಲ್ಲಿ ಬಹುತೇಕರು ವಿಚಾರಣೆಗೆ ಕಾಯುತ್ತಿರುವವರು ಎಂದು ಆಮ್ನೆಸ್ಟಿ ಇಂಟರ್‌ನ್ಯಾಷನಲ್ ತನ್ನ ಇತ್ತೀಚಿನ ವರದಿಯಲ್ಲಿ ತಿಳಿಸಿದೆ.

ಈ ಹಿಂದೆಯೂ ಜೈಲಿನಿಂದ ಪರಾರಿಯಾದ ಘಟನೆಗಳು ನಡೆದಿದ್ದವು. 2017ರಲ್ಲಿ ಧಾರ್ಮಿಕ ಪಂಥ ಒಂದರ ಸದಸ್ಯರು ಜೈಲಿನ ಮೇಲೆ ದಾಳಿ ನಡೆಸಿ ಅಲ್ಲಿನ ಕೈದಿಗಳನ್ನು ಬಿಡುಗಡೆಗೊಳಿಸಿದ್ದರು.

ಈ ಬಾರಿ ಕೈದಿಗಳು ಪರಾರಿ ಯತ್ನ ನಡೆಸಿದಾಗ ಭಾನುವಾರ ಮಧ್ಯರಾತ್ರಿಯಿಂದ ಗುಂಡಿನ ಚಕಮಕಿ ಆರಂಭವಾಯಿತು. ಸೋಮವಾರ ಬೆಳಗಿನ ಜಾವದವರೆಗೂ ಗುಂಡಿನ ಚಕಮಕಿ ನಡೆದಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.

ಈ ಜೈಲು ನಗರದ ಮಧ್ಯ ಭಾಗದಲ್ಲಿದೆ ಹಾಗೂ ಅಧ್ಯಕ್ಷರ ಅರಮನೆಯಿಂದ 5 ಕಿ.ಮೀ. ದೂರದಲ್ಲಿದೆ. ಸರ್ಕಾರ ಮೃತರ ನಿಜವಾದ ಸಂಖ್ಯೆ ಮುಚ್ಚಿಡುತ್ತಿದೆ, ಈ ಬಗ್ಗೆ ಸ್ವತಂತ್ರ ತನಿಖೆಯಾಗಬೇಕು ಎಂದು ಹಕ್ಕುಗಳ ಸಂಘಟನೆಗಳು ಹಾಗೂ ವಿರೋಧ ಪಕ್ಷಗಳು ಒತ್ತಾಯಿಸಿವೆ.

ಮಕಲಾ ಸೆರೆಮನೆಯಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚು ಜನರಿದ್ದು, ಹಲವರು ಹಸಿವಿನಿಂದ ಸಾವನ್ನಪ್ಪುತ್ತಿದ್ದಾರೆ ಎಂದು ಕಾರ್ಯಕರ್ತರು ಹೇಳಿದ್ದಾರೆ. ಬಂಧಿತರ ಸಂಖ್ಯೆ ಇಳಿಸಲು ಇತ್ತೀಚಿನ ತಿಂಗಳಲ್ಲಿ ಹಲವಾರು ಕೈದಿಗಳನ್ನು ಬಿಡುಗಡೆ ಮಾಡಲಾಗಿತ್ತು.

## ಪತ್ರಿಕಾ ವಿತರಕರಿಗೆ ಸೂಕ್ತ ನೆರವು ಕಲ್ಪಿಸಲು ಆಗ್ರಹ



ದಾವಣಗೆರೆ, ಸೆ.3- ರಾಜ್ಯದಲ್ಲಿರುವ 40 ಸಾವಿರ ಪತ್ರಿಕಾ ವಿತರಕರಿಗೆ ಸರ್ಕಾರ ಸೂಕ್ತ ನೆರವು ಕಲ್ಪಿಸಬೇಕಿದೆ ಎಂದು ಹಿರಿಯ ಪತ್ರಿಕಾ ವಿತರಕ ಕೃಷ್ಣಮೂರ್ತಿ ಆಗ್ರಹಿಸಿದ್ದಾರೆ.

ಪ್ರಸ್ತುತ ದಿನಮಾನಗಳಲ್ಲಿ ಪತ್ರಿಕಾ ವಿತರಕರ ಕುಟುಂಬಗಳು ಬಡತನದಲ್ಲಿ ಜೀವನ ನಡೆಸುತ್ತಿವೆ. ನಿತ್ಯವೂ ಕತ್ತಲು, ಗಾಳಿ, ಮಳೆಯನ್ನು ಲೆಕ್ಕಿಸದೇ ಸಮಾಜಕ್ಕೆ ನಿಸ್ವಾರ್ಥದಿಂದ ಸುದ್ದಿ ತಲುಪಿಸುವ ಕಾರ್ಯಕ್ಕೆ ನ್ಯಾಯ ಸಿಗಬೇಕಿದೆ.

ಪತ್ರಿಕಾ ವಿತರಕರ ಹಿತ ಕಾಪಾಡಲು ಸರ್ಕಾರವು 10 ಕೋಟಿ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸುವ ಜತೆಗೆ ಉಚಿತವಾಗಿ ಎಲೆಕ್ಟ್ರಿಕ್ ಬೈಕ್ ನೀಡುವಂತೆ ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ವಿತರಕರಿಗೆ ಪತ್ರಿಕೆ ವಿಂಗಡಿಸುವುದಕ್ಕೆ ಸೂಕ್ತ ಜಾಗವಿಲ್ಲ ಆದ್ದರಿಂದ ಜಿಲ್ಲಾಡಳಿತ ಈ ಬಗ್ಗೆ ಗಮನಹರಿಸಿ ಪರಿಹಾರ ಸೂಚಿಸ ಬೇಕೆಂದು ಮನವಿ ಮಾಡಿದ್ದಾರೆ.

# ಬಗರ್ ಹುಕ್ಕುಂ ಅರ್ಜಿ ಮಾನ್ಯಗೊಳಿಸಿ, ಹಕ್ಕು ಪತ್ರ ನೀಡುವಂತೆ ಪ್ರಾಂತ ರೈತ ಸಂಘ ಆಗ್ರಹ



ದಾವಣಗೆರೆ, ಸೆ.3- ಬಡವರ ಬಗರ ಹುಕ್ಕುಂ ಸಾಗುವಳಿ ಸಕ್ರಮ ಮಾಡಲು ಫಾರಂ ನಂಬರ್ 50, 53, 57ರಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಕೂಡಲೇ ಮಾನ್ಯಗೊಳಿಸಿ ಹಕ್ಕು ಪತ್ರ ವಿತರಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಟಿ. ಯಶವಂತ್ ಆಗ್ರಹಿಸಿದರು.

ನಗರದಲ್ಲಿ ಈಚೆಗೆ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ (ಕೆಪಿಆರ್‌ಎಸ್) ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಬಡವರಿಗೆ ಭೂಮಿ ಹಕ್ಕು ನೀಡುತ್ತೇವೆಂದು ಅಧಿಕಾರಕ್ಕೆ ಬಂದ ರಾಜ್ಯ ಸರ್ಕಾರ, ಬಡವರಿಗೆ ಭೂಮಿ ನೀಡದೇ ವಂಚಿಸುತ್ತಿದೆ. ರಾಜ್ಯ ಸರ್ಕಾರದ ಭೂ ನೀತಿಯ ಪ್ರಧಾನ ಫಲಾನುಭವಿಗಳು ಬಂಡವಾಳ ಶಾಹಿಗಳಾಗುತ್ತಿದ್ದಾರೆ ಎಂದು ದೂರಿದರು.

ಬಳ್ಳಾರಿ ಜಿಲ್ಲೆಯ ತೋರಣಗಲ್ ಎಂಬ ಪ್ರದೇಶದಲ್ಲಿ ಪ್ರತಿ ಎಕರೆಗೆ 3 ಕೋಟಿ ರೂ. ಬೆಲೆ ಬಾಳುವ 3667 ಎಕರೆ ಭೂಮಿಯನ್ನು ಕೇವಲ 1 ಲಕ್ಷ ರೂ.ಗೆ ಕ್ರಯದ ಮೂಲಕ ಹಸ್ತಾಂತರಿಸುತ್ತಿದೆ. ರಾಜ್ಯದ ಎಲ್ಲಾ ಕಡೆ ಬಲವಂತದಿಂದ ಭೂ ಸ್ವಾಧೀನ ಪಡಿಸುವ ಮೂಲಕ ರೈತರ ಭೂಮಿಯನ್ನು ಬಂಡವಾಳ ಶಾಹಿಗಳಿಗೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಮೋದಿ ಸರ್ಕಾರದ ಕಾರ್ಪೊರೇಟ್ ಕಂಪನಿ ಧೋರಣೆಯನ್ನು ರಾಜ್ಯದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅನುಸರಿಸುತ್ತಿರುವುದು ಎದ್ದು ಕಾಣುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಸಂಚಾಲಕ ಶ್ರೀನಿವಾಸ್ ಮಾತನಾಡಿ, ಜಿಲ್ಲೆಯ ಸಾವಿರಾರು ಜನ ಬಗರ್ ಹುಕ್ಕುಂ ಸಾಗುವಳಿದಾರರಿಗೆ ಅನ್ಯಾಯವಾಗುತ್ತಿದೆ. ಕಂದಾಯ ಇಲಾಖೆ ಕೊಟ್ಟ ಸಾಗುವಳಿ ಹಕ್ಕು ಪತ್ರ ಇದ್ದರೂ ಸಹ ನಲ್ಕುಂದ, ಹುಲಿಕಟ್ಟೆ, ನಿಲೋಗಲ್ಲು, ಮ್ಯಾಸ್ರಳ್ಳಿ, ಮಾಯಕೊಂಡ ಸೇರಿದಂತೆ ಹತ್ತಾರು ಹಳ್ಳಿಗಳಲ್ಲಿ ಅರಣ್ಯ ಇಲಾಖೆಯ ಮೂಲಕ ಒಕ್ಕಲೆಬ್ಬಿಸಲು ಕಿರುಕುಳ, ದೌರ್ಜನ್ಯ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಮನೆ, ನಿವೇಶನ ಇಲ್ಲದಂತಹ ಸಾವಿರಾರು ಜನರಿಗೆ ನಿವೇಶನ ಕೊಡಲು ಕ್ರಮವಹಿಸುತ್ತಿಲ್ಲ. ಕಳೆದ 15 ತಿಂಗಳಲ್ಲಿ 50ಕ್ಕೂ ಅಧಿಕ ರೈತರ ಆತ್ಮಹತ್ಯೆ ಪ್ರಕರಣ ಜಿಲ್ಲೆಯಲ್ಲಿ ವರದಿಯಾಗಿದ್ದರೂ ಸ್ಥಳೀಯ ಶಾಸಕರು ಮತ್ತು ಸಂಸದರು ಏನೂ ಆಗಿಲ್ಲವೆಂಬಂತೆ ಮೌನವಾಗಿದ್ದಾರೆ ಎಂದು ಕಿಡಿ ಕಾರಿದರು.

ಸಭೆಯಲ್ಲಿ ತಾಲ್ಲೂಕು ಮುಖಂಡರಾದ ಭರ್ಮಪ್ಪ ನಲ್ಕುಂದ, ರಾಜಣ್ಣ ನಿಲೋಗಲ್, ಮಾಂತೇಶ್, ನಾಗರಾಜ್ ಮತ್ತಿತರರಿದ್ದರು.

# ಹಸಿವು, ಬಡತನ ನಿವಾರಣೆಗೆ ಮದ್ದುಂಟೆ..?



*ಕಸಿದು ತಿನ್ನುವ ತಾಕತ್ತು ನನಗಿಲ್ಲ*
*ಆದರೂ ಹೊಟ್ಟೆ ಹಸಿದಿದೆಯಲ್ಲ*
*ಉಳ್ಳವರು ತಿಂದುಳಿದುದನು ಚೆಲ್ಲಿದರೇ ಹೊರತು*
*ನನ್ನೊಳಗಿನ ಹಸಿವಿನ ಕುರಿತು ವಿಚಾರಿಸಲಿಲ್ಲ*
*ನನ್ನ ಬಳಿ ಕರೆದು ತಿನ್ನಲೇನೂ ಕೊಡಲಿಲ್ಲ*
*ಆದರೂ ಅವರ ಬಗೆಗೆ ಮುನಿಸಿಕೊಳ್ಳುವುದಿಲ್ಲ*
*ಚೆಲ್ಲಿರುವ ಆಹಾರವಾದರೇನಂತೆ ನನ್ನ ಹಸಿವ ನೀಗಿಸುವುದಲ್ಲ*
*ಮಿಗಿಲಾಗಿ ಈ ತುತ್ತು ಭೂತಾಯಿಯ ಬಟ್ಟಲಿನಲ್ಲಿಹುದಲ್ಲ.*

(ಸಂಗ್ರಹ)

ಈ ಭೂಮಿ ಮೇಲಿರುವ ಜೀವರಾಶಿಗಳಿಗೆ ಎದುರಾಗಿರುವ ಅತಿ ದೊಡ್ಡ ಸಮಸ್ಯೆಯೆಂದರೆ ಅದೇ ಹಸಿವು. ಪ್ರಪಂಚದಲ್ಲಿರುವ ಎಲ್ಲಾ ತಾಯಂದಿರಿಗೆ ಜನನವಾಗುವ ಮಗು ಮೊದಲು ಅಳುತ್ತದೆ. ಭೂಮಿಗೆ ಬಂದ ಕಂದನ ಮೊದಲ ಅಳುವಿನಿಂದ ಪ್ರಾರಂಭವಾಗುವುದೇ ಹಸಿವು. ಪ್ರಪಂಚದಲ್ಲಿ ಸಾವಿರಾರು ಕೋಟಿ ಜೀವರಾಶಿಗಳಿವೆ. ಈ ಜೀವರಾಶಿಗಳಿಗೆ ಹಸಿವು ಸಾಮಾನ್ಯ, ಇದರಲ್ಲಿ ಬುದ್ಧಿ ಜೀವಿಯಾದ ಮನುಷ್ಯನೇ ಮೊದಲು.

ಮನುಷ್ಯ ತನ್ನ ಹಸಿವನ್ನು ಹೇಳಿಕೊಳ್ಳುತ್ತಾನೆ, ಆದರೆ ಪ್ರಾಣಿ, ಪಕ್ಷಿಗಳು ತಮ್ಮ ಹಸಿವನ್ನುಹೇಳಿಕೊಳ್ಳುವುದಿಲ್ಲ.ಹಸಿವು ಮತ್ತು ಬಡತನವನ್ನು ಅನುಭವಿಸಿದವರಿಗೇ ಗೊತ್ತಿರುತ್ತದೆ ಅದೆಷ್ಟು ಕ್ರೂರ ಎಂದು. ಇತ್ತೀಚೆಗಂತೂ ಮಾನವ ಸಂಕುಲದಲ್ಲಿ ಬಹಳಷ್ಟು ಎದುರಾಗಿರುವ ಸಮಸ್ಯೆಯೆಂದರೆ ಆಹಾರದ ಕೊರತೆ ಮತ್ತು ಬಡತನದ ವ್ಯವಸ್ಥೆ. ಹಸಿವನ್ನು ಪೂರೈಸಲು ಆಹಾರವೇ ಬೇಕೇ ಹೊರತು ಯಾವುದೇ ಹಣ-ಆಸ್ತಿ ಬೇಕಾಗಿರುವುದಿಲ್ಲ. ಹಸಿದ ಹೊಟ್ಟೆಗೆ ಆಹಾರ ಬೇಕು. ಅದನ್ನು ಬಿಟ್ಟು ಬೇರೆ ಯಾವುದರಿಂದಲೂ ಹಸಿವು ಮುಕ್ತಿ ಪಡೆಯುವುದಿಲ್ಲ.

ನಮ್ಮ ದೇಶದಲ್ಲಂತೂ ಹಸಿವು ಮತ್ತು ಬಡತನವು ಶೇ. 44 ರಷ್ಟು ಜನರನ್ನು ಕಾಡತೊಡಗುತ್ತದೆ. ಕೆಲವರು ಆಶ್ರಯವಿಲ್ಲದೆ ಸುಮಾರು ಬೃಹತ್ ನಗರಗಳ ರೈಲ್ವೆ ಸ್ಟೇಷನ್, ಬಸ್ ಸ್ಟ್ಯಾಂಡ್, ಫುಟ್‌ಪಾತ್ ಮತ್ತು ಸಾರ್ವಜನಿಕ ಸ್ಥಳಗಳನ್ನೆಲ್ಲ ಆಶ್ರಯ ತಾಣವಾಗಿ ಮಾಡಿಕೊಂಡಿರುತ್ತಾರೆ. ಏಕೆಂದರೆ ಕಾಡುತ್ತಿರುವ ಬಡತನ.

ಇತ್ತೀಚೆಗಂತೂ ಬಿಡಿ 'ಫ್ಯಾಷನ್ ಯುಗ' ರೆಸ್ಟೋರೆಂಟ್, ಮಾಲ್, ಮದುವೆ ಮುಂಜಿ ಕಾರ್ಯಕ್ರಮಗಳಲ್ಲಿ ಮಾನವರು ತಮ್ಮ ಗೌರವವನ್ನು ಉಳಿಸಿಕೊಳ್ಳಲು ಆಹಾರದ ಸ್ವಾದ ಮಾಡುವ ಪದ್ಧತಿಯೂ ಎದುರಾಗಿದೆ. ಇದು ಉತ್ತಮವಾದ ಬೆಳವಣಿಗೆಯಲ್ಲ.

ಇತ್ತೀಚೆಗೆ ಬಿಡುಗಡೆಯಾದ ಜಾಗತಿಕ ಹಸಿವು ಸೂಚ್ಯಂಕದಲ್ಲಿ 117 ರಾಷ್ಟ್ರಗಳ ಪೈಕಿ ಭಾರತವೂ 104ನೇ ಸ್ಥಾನದಲ್ಲಿದೆ. ಈ ಸೂಚ್ಯಂಕವು ಸುಸಜ್ಜಿತವಾಗಿ ಹೇಳುತ್ತದೆ ಭಾರತವು ಎಷ್ಟು ಹಸಿವಿನಿಂದ ನರಳುತ್ತಿದೆ ಎಂದು. ಮನುಷ್ಯನ ಎಲ್ಲ ದುಡಿಮೆಯ ಮೊದಲ ಆದ್ಯತೆ ಹೊಟ್ಟೆಪಾಡಿಗಾಗಿ, ಅದರ ಜೊತೆ ತನ್ನ ಸುತ್ತ-ಮುತ್ತಲಿರುವ ನಿರಾಶ್ರಿತರಿಗೆ ಕಡು ಬಡವರಿಗೆ ಕೈಲಾದಷ್ಟು ಸಹಾಯವನ್ನು ಮಾಡಿ ಅವರಿಗೆ ಕ್ರೂರವಾದ ಹಸಿವಿನಿಂದ ಹೊರಬರಲು ನಾವೆಲ್ಲ ನೆರವಾಗಬೇಕು. ಕೆಲವರು ಬಸ್ ಸ್ಟ್ಯಾಂಡ್‌ಗಳಲ್ಲಿ ಊಟವಿಲ್ಲದೇ ಬೇಡಿದಾಗ ನಿಮ್ಮ ಕೈಲಾದಷ್ಟು ಸಹಾಯ ಮಾಡಿ... ಎಂದಿಗೂ ಇಲ್ಲವೆಂದು ಅವರನ್ನು ದೂರಬೇಡಿ. ಏಕೆಂದರೆ "ಯಾವುದೇ ವಿಶ್ವವಿದ್ಯಾನಿಲಯ ಕಲಿಸದಷ್ಟು ಪಾಠವನ್ನು ಹಸಿವು ಮತ್ತು ಬಡತನ ಕಲಿಸುತ್ತದೆ". ಒಂದು ಅನ್ನದ ಅಗಳು ಸಾವಿರಾರು ಕೋಟಿಗೆ ಸಮಾನ, ಅನ್ನವನ್ನು ಎಂದಿಗೂ ಚೆಲ್ಲಿ ಹಾಳು ಮಾಡಬೇಡಿ.

ಮನುಷ್ಯನು ಮಾನವ ಸಮುದಾಯಕ್ಕೆ ನೆರವಾಗದೇ ಇನ್ನು ಮೃಗಗಳಿಗೆ ನೆರವಾಗಲು ಸಾಧ್ಯವಾ? ಆದ ಕಾರಣ ಹಸಿದ ಹೊಟ್ಟೆಗಳಿಗೆ ತಮ್ಮ ಕೈಲಾದಷ್ಟು ಆಹಾರವನ್ನು ನೀಡಿ. ಹಸಿವು ಮತ್ತು ಬಡತನ ನಿವಾರಣೆಗಳಿಗೆ ಜಗತ್ತಿನಲ್ಲಿ ಯಾವುದೇ ಮದ್ದು ಗಳಿಲ್ಲ. ನಾವು ಇನ್ನೊಬ್ಬರ ಹಸಿವನ್ನು ನೀಗಿಸುವ ಕಾರ್ಯದಲ್ಲಿ ತೊಡಗಿ ಕೊಂಡರೆ ಮಾತ್ರ ಅದು ಸಾಧ್ಯವಾಗುತ್ತದೆ.

ಭಾರತವು ಬಡವರಿಂದ ಕೂಡಿದ ಶ್ರೀಮಂತ ದೇಶ ಎಂಬ ಟೀಕೆಯೂ ಇದೆ. ಇದು ನಮ್ಮನ್ನು ಕಾಡುತ್ತಿರುವ ದೊಡ್ಡ ಸಮಸ್ಯೆ ಹಾಗೂ ಶಾಪವೂ ಹೌದು, ಇದರಿಂದ ನಾವು ಜಾಗತಿಕ ಮಟ್ಟದಲ್ಲಿ ಮುಜುಗರವನ್ನು ಅನುಭವಿಸಿರುವುದು ನಿಜ. ಇದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೊದಲಿನಿಂದಲೂ ಬಡತನ ನಿವಾರಣೆಗೆ ದೊಡ್ಡ ಸಮರವನ್ನೇ ನಡೆಸಿವೆ, ಬಡತನ ನಿವಾರಣೆಗೆ ಹಲವಾರು ಕಾರ್ಯಕ್ರಮಗಳಾದ ಗರೀಬಿ ಹಠಾವೋ, ಅನ್ನಭಾಗ್ಯ ಇಂದಿರಾ ಕ್ಯಾಂಟೀನ್ ಇವೆಲ್ಲವೂ ನೆರವಾಗುವ ಕಾರ್ಯಕ್ರಮಗಳು. ನಮ್ಮದು ವಿಶ್ವದ ಬೃಹತ್ ಅರ್ಥವ್ಯವಸ್ಥೆಗಳಲ್ಲೊಂದಾದ ರಾಷ್ಟ್ರ. ನಮ್ಮಲ್ಲಿ ಹಲವಾರು ಶತಕೋಟ್ಯಾಧಿಪತಿಗಳಿದ್ದಾರೆ ಹಾಗೂ ಕಡುಬಡವರೂ ಇದ್ದಾರೆ. ನಮ್ಮದು ವಿಶಾಲವಾದ ದೇಶ ಮತ್ತು ಬಹು ಜನಸಂಖ್ಯೆ ದೇಶ. ಹೀಗಾಗಿ ಸಂಪತ್ತಿನ ಹಂಚಿಕೆ ಕ್ರಮಬದ್ಧ ಮತ್ತು ಏಕರೂಪ ಆಗಿಲ್ಲದಿರುವುದರಿಂದ ಈ ಸಮಸ್ಯೆಗಳು ಬೃಹದಾಕಾರವಾಗಿ ಕಾಡುತ್ತವೆ.

ಈ ಅಂಶಗಳನ್ನು ಮನಗಂಡು ಸರ್ಕಾರ ಮತ್ತು ನೀತಿ ನಿರೂಪಕರು ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು. ನಾವು ಬಡ ರಾಷ್ಟ್ರದಿಂದ ಬಲಾಢ್ಯ ರಾಷ್ಟ್ರದ ಕಡೆಗೆ ದಾಪುಗಾಲನ್ನು ಇಡುತ್ತಿದ್ದೇವೆ. ಅದಕ್ಕೆ ಇಂತಹ ಅಧ್ಯಯನಗಳು ಸಾಕ್ಷಿ, ಆ ನಿಟ್ಟಿನಲ್ಲಿ ಸಾಗುವಲ್ಲಿ ನಮ್ಮ ಸಂಕಲ್ಪಗಳನ್ನು ಬಲಗೊಳಿಸಿ, ಬಡತನ ಮತ್ತು ಹಸಿವಿನ ನಿವಾರಣೆಗಾಗಿ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಹೊಡೆದೋಡಿಸುವ ಕಾರ್ಯಗಳಲ್ಲಿ ನಾವೆಲ್ಲರೂ ನಿರತರಾಗಬೇಕು ಎಂಬುದೇ ನನ್ನ ಆಶಯ.



**- ಮಲ್ಲೇಶ್ ಎಂ. ನಾಯ್ಕ್**
ಉಪನ್ಯಾಸಕರು,
ದಾವಣಗೆರೆ.

## ಸಂಕಲ್ಪ ಫೌಂಡೇಷನ್‌ನಿಂದ ನೇತ್ರ ತಪಾಸಣೆ



ದಾವಣಗೆರೆ, ಸೆ.3- ಸಂಕಲ್ಪ ಸೇವಾ ಫೌಂಡೇಷನ್, ನೇತ್ರಾಲಯ ಹಾಗೂ ಕರ್ನಾಟಕ ರಾಜ್ಯ ಸರ್ವ ಜನಾಂಗ ಏಕತಾ ರಕ್ಷಣಾ ಸಮಿತಿ ಇವರ ಸಹಯೋಗದೊಂದಿಗೆ ಎಸ್. ನಿಜಲಿಂಗಪ್ಪ ಬಡಾವಣೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಲಾಗಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಪಾಲಿಕೆ ಸದಸ್ಯ ಎ. ನಾಗರಾಜ್ ಉದ್ಘಾಟಿಸಿದರು.

ಸಂಕಲ್ಪ ಸೇವಾ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಜಿ. ಮಹಾಂತೇಶ್, ಕರ್ನಾಟಕ ರಾಜ್ಯ ಸರ್ವ ಜನಾಂಗ ಏಕತಾ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಕಣ್ಣಾಳ ಅಂಜಿನಪ್ಪ ಶಾಮನೂರು, ಅಯ್ಯಪ್ಪಸ್ವಾಮಿ ದೇವಸ್ಥಾನ ಅಧ್ಯಕ್ಷ ಸತ್ಯನಾರಾಯಣರಾವ್, ರಾಜ್ಯ ಸರ್ವ ಜನಾಂಗ ಏಕತಾ ರಕ್ಷಣಾ ಸಮಿತಿ ಜಿಲ್ಲಾಧ್ಯಕ್ಷ ಎಂ. ಹನುಮಂತ್, ಸದಸ್ಯರಾದ ಬಿ. ಶಂಕರ್, ಎಸ್. ರಾಜು, ಹೆಚ್. ಯೂಸೂಫ್, ಪರಮೇಶ್, ಗಿರೀಶ್ ಹೆಗಡೆ, ಸಮೀರ್, ವಿನೋದ್, ವಿದ್ಯಾನಂದ, ಪರಶುರಾಮ್, ರಾಮಣ್ಣ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಹೆದ್ದಾರಿ ಸರ್ವೀಸ್ ರಸ್ತೆ ಪೂರ್ಣಗೊಳಿಸಿ

**(1ನೇ ಪುಟದಿಂದ)** ಸಿಗಬೇಕಾದ ಪರಿಹಾರ ಮೊತ್ತವನ್ನು ಪಾವತಿಸಿ ಅಥವಾ ಠೇವಣಿ ಇಟ್ಟು ಕಾಮಗಾರಿ ಮುಂದುವರೆಸಿ. ಅಗತ್ಯವಿದ್ದಲ್ಲಿ ಪೊಲೀಸ್ ರಕ್ಷಣೆ ಒದಗಿಸಲಾಗುತ್ತದೆ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಹೇಳಿದರು. ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್, ಉಪ ವಿಭಾಗಾಧಿಕಾರಿ ಸಂತೋಷ್ ಪಾಟೀಲ್, ತಹಶೀಲ್ದಾರ್ ಅಶ್ವತ್ಥ್, ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಶಿವಕುಮಾರ್ ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಜಿ.ಎಂ ಫಾರ್ಮಸಿ ಕಾಲೇಜಿನಲ್ಲಿ ಕಬಡ್ಡಿ ಪಂದ್ಯಾವಳಿ



ದಾವಣಗೆರೆ, ಸೆ. 3- ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಜೋನಲ್ ಮಟ್ಟದ ಕಬಡ್ಡಿ ಪಂದ್ಯಾವಳಿಯು ನಗರದ ಜಿ.ಎಂ ಫಾರ್ಮಸಿ ಕಾಲೇಜಿನಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಡಾ. ಹೆಚ್.ಡಿ. ಮಹೇಶಪ್ಪ, ಡಾ. ಸುನಿಲ್‌ಕುಮಾರ್ ಹಾಗೂ ವಿವಿಧ ಕಾಲೇಜಿನ ದೈಹಿಕ ನಿರ್ದೇಶಕರು ಭಾಗವಹಿಸಿದ್ದರು.

ಹುಬ್ಬಳ್ಳಿಯ ವಿಘ್ನೇಶ್ವರ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಕಾಲೇಜಿನ ಉಮೇಶ್ ನಾಯಕತ್ವದ ತಂಡ ಮೊದಲ ಸ್ಥಾನ ಪಡೆದುಕೊಂಡಿರು.

ಹರಪನಹಳ್ಳಿಯ ಎಸ್‌ಸಿಎಸ್ ಕಾಲೇಜ್ ಆಫ್ ಫಾರ್ಮಸಿ ಸುದೀಪ್ ನಾಯಕತ್ವದ ತಂಡ ದ್ವಿತೀಯ ಸ್ಥಾನ ಹಾಗೂ ಚಳ್ಳಕೆರೆಯ ಬಾಪೂಜಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಸುರೇಶ್ ನಾಯಕತ್ವದ ತಂಡ ಮೂರನೇ ಸ್ಥಾನ ಮತ್ತು ಜಿ.ಎಂ.ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯೂಟಿಕಲ್ ಸೈನ್ಸ್ ಅಂಡ್ ರಿಸರ್ಚ್‌ನ ಅಭಿಷೇಕ್ ನಾಯಕತ್ವದ ತಂಡ ನಾಲ್ಕನೇ ಸ್ಥಾನ ಪಡೆದುಕೊಂಡಿವೆ.

ಜಿ.ಎಂ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಗಿರೀಶ್ ಬೋಳಕಟ್ಟಿ, ಕ್ರೀಡಾ ವಿಭಾಗದ ಮುಖ್ಯಸ್ಥ ಮೊಹಮ್ಮದ್ ಯೂಸುಫ್ ಧಮನಿ ಹಾಗೂ ಯಶವಂತ ಎ.ಎಂ. ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸ್ವಚ್ಛ, ಹಸಿರು ನಗರ; ಅಗತ್ಯ ಜನರ ಸಹಕಾರ



**(1ನೇ ಪುಟದಿಂದ)** ಸ್ಥಾನಕ್ಕೇರಲು ಸಾಮೂಹಿಕ ಪ್ರಯತ್ನದ ಅಗತ್ಯವಿದೆ ಎಂದು ಅಭಿಪ್ರಾಯಿಸಿದರು.

ದಾವಣಗೆರೆ ನಗರವು 2023 ರ ಸ್ವಚ್ಛ ಸರ್ವೇಕ್ಷಣೆಯಲ್ಲಿ ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ 4ನೇ ಸ್ಥಾನ ಪಡೆದಿತ್ತು. ಕೇಂದ್ರ ಸರ್ಕಾರದ 'ನನ್ನ ಜೀವನ, ನನ್ನ ಸ್ವಚ್ಛ ನಗರ' ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದ ರಾಜ್ಯದ 6 ನಗರಗಳಲ್ಲಿ ದಾವಣಗೆರೆಯೂ ಒಂದಾಗಿದೆ ಎಂದು ಸಂಸದರು ಹೇಳಿದರು.

ಸಾರ್ವಜನಿಕರಿಗೆ ಹಸಿ ಕಸ, ಒಣ ಕಸವನ್ನು ಬೇರ್ಪಡಿಸಬೇಕೆಂಬುದರ ಬಗ್ಗೆ, ಚರಂಡಿಗಳಲ್ಲಿ ಕಸವನ್ನು ಹಾಕುತ್ತಿರುವ ಜನರಿಗೆ ಹೆಚ್ಚು ಜಾಗೃತಿ ಮೂಡಿಸುವ ಅಗತ್ಯವಿದೆ. ಖಾಲಿ ನಿವೇಶನಗಳಲ್ಲಿ ಕಸ ಇಲ್ಲದಂತೆ ನೋಡಿಕೊಳ್ಳಬೇಕು. ಕಟ್ಟಡ ತ್ಯಾಜ್ಯಗಳನ್ನು ಹಾಕಲು ನಿರ್ದಿಷ್ಟ ಗಡಿ ನಿಗದಿಯಾಗಬೇಕು. ಪ್ಲಾಸ್ಟಿಕ್ ಬಳಕೆ ನಿಷೇಧವಾಗಬೇಕು. ಹಸಿ ಹಾಗೂ ಒಣ ಕಸ ವಿಲೇವಾರಿ ಪರಿಣಾಮಕಾರಿ ಆಗಬೇಕು. ಬೀದಿಬದಿ ವ್ಯಾಪಾರಿಗಳಿಗೆ ಶಾಶ್ವತ ಜಾಗ ನೀಡಬೇಕು ಎಂದು ತಿಳಿಸಿದರು.

ಚನ್ನಗಿರಿ ತಾಲೂಕು ಜೋಳದಾಳ್ ಗ್ರಾಮದಲ್ಲಿ ಇತ್ತೀಚೆಗೆ ಕಲುಷಿತ ನೀರು ಸೇವಿಸಿ 90 ಜನರು ಅಸ್ವಸ್ಥರಾದ ಪ್ರಕರಣವನ್ನು ಪ್ರಸ್ತಾಪಿಸಿ, ಆ ಊರಿನಲ್ಲಿ ಕುಡಿಯುವ ನೀರು ಸರಬರಾಜು ಮಾಡುವ ಕೊಳವೆಗಳು ರಸ್ತೆಗಿಂತ ಕೆಳಗಿವೆ. ಹಲವು ಕಡೆ ಚರಂಡಿ ಮೇಲೆಯೇ ನಲ್ಲಿ ಸಂಪರ್ಕವಿದೆ. ಈ ಬಗ್ಗೆ ಜನಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ತಮ್ಮ ಮೊದಲ ತಿಂಗಳ ವೇತನವನ್ನು ವೈನಾಡು ಭೂಕುಸಿತ ದುರಂತದ ನಿರಾಶ್ರಿತರಿಗೆ ನೀಡಲು ಜಿಲ್ಲಾಧಿಕಾರಿಗಳಿಗೆ ಹಸ್ತಾಂತರಿಸಿದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮಾತನಾಡಿದರು. ಮೇಯರ್ ವಿನಾಯಕ ಪೈಲ್ವಾನ್, ಉಪ ಮೇಯರ್ ಯಶೋದ, ಪಾಲಿಕೆ ವಿಪಕ್ಷ ನಾಯಕ ಪ್ರಸನ್ನಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಆಯುಕ್ತೆ ರೇಣುಕಾ, ವೀರೇಂದ್ರ ಕುಂದಗೋಳ್ ಇದ್ದರು. ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಡಾ.ಎನ್. ಮಹಾಂತೇಶ್ ಸ್ವಾಗತಿಸಿದರು.

# ಕಳೆದ ವರ್ಷ ರೈಲ್ವೇ ಉದ್ಯೋಗಿಗಳ ವಿರುದ್ಧ ಅತಿ ಹೆಚ್ಚಿನ ದೂರುಗಳು

ನವದೆಹಲಿ, ಸೆ. 3 - ಕಳೆದ ವರ್ಷ ರೈಲ್ವೆ ಉದ್ಯೋಗಿಗಳ ವಿರುದ್ಧ ಅತಿ ಹೆಚ್ಚಿನ ದೂರುಗಳು ದಾಖಲಾಗಿವೆ ಎಂದು ಕೇಂದ್ರ ವಿಚಕ್ಷಣ ಆಯೋಗದ ಮಾಹಿತಿ ತಿಳಿಸಿದೆ. 2023ರಲ್ಲಿ ಎಲ್ಲಾ ಹಂತದ ಅಧಿಕಾರಿಗಳು ಹಾಗೂ ಉದ್ಯೋಗಿಗಳ ವಿರುದ್ಧ 74,203 ಲಂಚದ ದೂರುಗಳು ದಾಖಲಾಗಿದ್ದವು. 66,373 ದೂರುಗಳನ್ನು ವಿಲೇವಾರಿ ಮಾಡಲಾಗಿದೆ. 7,830 ಬಾಕಿ ಇವೆ ಎಂದು ವಿಚಕ್ಷಣ ಆಯೋಗದ ಮಾಹಿತಿ ತಿಳಿಸಿದೆ. ರೈಲ್ವೆ ಉದ್ಯೋಗಿಗಳ ವಿರುದ್ಧ ಅತಿ ಹೆಚ್ಚಿನ 10,447 ದೂರುಗಳು ದಾಖಲಾಗಿವೆ. ದೆಹಲಿ ವಲಯದ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ವಿರುದ್ಧ 7,665 ದೂರುಗಳು ದಾಖಲಾಗಿವೆ. ಸಾರ್ವಜನಿಕ ವಲಯದ ಬ್ಯಾಂಕು ಉದ್ಯೋಗಿಗಳ ವಿರುದ್ಧ 7,004 ದೂರುಗಳು ಬಂದಿವೆ.

## ಹರಿಹರ ತಾಲ್ಲೂಕಿನ ಹಿಂಡಸಘಟ್ಟದ ಅರುಣ್‌ಗೆ ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ

**(1ನೇ ಪುಟದಿಂದ)** ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಜಮೀರ್ ಅಬ್ದುಲ್ ಗಫೂರ್ ಸಾಬ್ ರಿತ್ತಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಶಿವಮೊಗ್ಗದ ಗುತ್ತೆಪ್ಪ ಕಾಲೋನಿಯಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ಎಂ. ಭಾಗೀರಥಿ ಹಾಗೂ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಹಿರೇಕೊಳಚಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಎಲ್. ಮಧು ನಾಯ್ಕ ಪ್ರಶಸ್ತಿ ಪಡೆದಿದ್ದಾರೆ.

## ಸೈನ್ಯಕ್ಕೆ ಬಲ ತುಂಬಲು ಕೇಂದ್ರ ಒಪ್ಪಿಗೆ

**(1ನೇ ಪುಟದಿಂದ)** ಎಂದು ಸೈನ್ಯದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಭಾರತೀಯ ಕರಾವಳಿ ಗಾರ್ಡ್ (ಐ.ಎಸ್.ಜಿ.) ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗುವ ಮೂರು ಖರೀದಿಗಳಿಗೂ ಒಪ್ಪಿಗೆ ನೀಡಲಾಗಿದೆ. ಡಾರ್ನಿಯರ್ -228 ವಿಮಾನ, ಮುಂದಿನ ಪೀಳಿಗೆಯ ವೇಗದ ಗಸ್ತು ದೋಣಿಗಳು ಹಾಗೂ ಜಲಗಡಿಯ ಗಸ್ತು ದೋಣಿಗಳಿಗೆ ಆಧುನಿಕ ತಂತ್ರಜ್ಞಾನ ಖರೀದಿ ಪ್ರಸ್ತಾಪಕ್ಕೆ ಒಪ್ಪಿಗೆ ನೀಡಲಾಗಿದೆ.

## ನಗರದಲ್ಲಿ ಇಂದು ಜಿಲ್ಲಾ ಶಸಾಪ ಸಭೆ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಬಸವ ಮಂಟಪದಲ್ಲಿ ಇಂದು ಬೆಳಿಗ್ಗೆ 11ಕ್ಕೆ ಪರಿಷತ್ತಿನ 30ನೇ ವಾರ್ಷಿಕ ಮಹಾಸಭೆಯ ಬಗ್ಗೆ ಚರ್ಚಿಸಲು, 'ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆಯ ಜಿಲ್ಲಾ ಹಾಗೂ ತಾಲ್ಲೂಕು ಕಾರ್ಯಕಾರಿ ಸಮಿತಿ ಸದಸ್ಯರ ಸಭೆ ನಡೆಯಲಿದೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಪಶ್ಚಿಮ 30x40 (ಅಕ್ಕ-ಪಕ್ಕ) ಹೊಸ ಬನಶಂಕರಿ ಪೂರ್ವ 30x50, 40x60 ಅಕ್ಕ-ಪಕ್ಕ, ಪಶ್ಚಿಮ 40x70 (ಅಕ್ಕ-ಪಕ್ಕ), ಪೂರ್ವ 30x57 ಅಕ್ಕ-ಪಕ್ಕ, ಡಾಲರ್ಸ್ ಕಾಲೋನಿ ದಕ್ಷಿಣ 30x57, ಮಹಾಲಕ್ಷ್ಮಿ ಲೇಔಟ್ ಪಶ್ಚಿಮ 30x50 (ಕಾವೇರಿ ಅಪಾರ್ಟ್‌ಮೆಂಟ್)
ಐಗೂರು ವಿಜಯಕುಮಾರ್
99457 02495

**ಶಿಕ್ಷಕಿಯರು ಬೇಕಾಗಿದ್ದಾರೆ**
5ನೇ ತರಗತಿಯ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳಿಗೆ ಎಲ್ಲಾ ವಿಷಯಗಳನ್ನು ಬೋಧಿಸಲು ಅನುಭವಿ ಶಿಕ್ಷಕಿಯರು (3) ಬೇಕಾಗಿದ್ದಾರೆ. ನಿಟ್ಟುವಳ್ಳಿಯಲ್ಲಿರುವವರಿಗೆ ಮೊದಲ ಆದ್ಯತೆ.
ಸಮಯ : ಬೆಳಗ್ಗೆ 6ರಿಂದ 9.30ರವರೆಗೆ, ಬೆಳಿಗ್ಗೆ 9.30ರಿಂದ ಸಂಜೆ 5ರವರೆಗೆ, ಸಂಜೆ 5 ರಿಂದ ರಾತ್ರಿ 8.30ರವರೆಗೆ.
99028 24909, 98447 48763

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಸಿದ್ದವೀರಪ್ಪ ಬಡಾವಣೆ, 3ನೇ ಕ್ರಾಸ್, ಮನೆ ಕೆಲಸಕ್ಕೆ ಬೇಕಾಗಿದ್ದಾರೆ. ಲಿಂಗಾಯತರು
76764 61686

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಮನೆ ಬಾಡಿಗೆಗೆ ಇದೆ**
ನಗರದ ಹೊಂಡದ ರಸ್ತೆ, ಜನತಾ ವಿದ್ಯಾಲಯ ಹತ್ತಿರ, ಗ್ರೌಂಡ್ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗಿದೆ. (10x40)
94820 68798

**ಮನೆಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ, ಉತ್ತರ 30x40 (ಮೇಲೆ-ಕೆಳಗೆ), ಎಸ್.ಎಸ್. ಎ ಬ್ಲಾಕ್ ಪೂರ್ವ 30x40 (ಡುಪ್ಲೆಕ್ಸ್), ಎಸ್.ಎಸ್. ಬಿ ಬ್ಲಾಕ್ ಪೂರ್ವ 50x33, ದಕ್ಷಿಣ 30x40 (ಡುಪ್ಲೆಕ್ಸ್), ಮಹಾಲಕ್ಷ್ಮಿ ಲೇಔಟ್ ಉತ್ತರ 30x50 (ಡುಪ್ಲೆಕ್ಸ್)
ಐಗೂರು ವಿಜಯಕುಮಾರ್
99457 02495

**ಕಾರುಗಳು ಮಾರಾಟಕ್ಕಿವೆ**
Alto K10 VXI
Maruthi Celerio Automatic
Hyundai I10 Grand
Swift Petrol Vxi
ದೈವಿಕ್ ಐನಳ್ಳಿ
9945643223

**ಬೇಕಾಗಿದ್ದಾರೆ**
ಕಂಪ್ಯೂಟರ್ ಜ್ಞಾನವುಳ್ಳ, ಕ್ಯಾಡ್ ಮತ್ತು ಲೇಔಟ್ ಪ್ಲಾನ್ ಮಾಡುವಂತಹ ಅನುಭವವಿರುವ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ : 99640-05604
76766-96963

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ, 30x40 ಪೂರ್ವ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**HOUSE FOR RENT**
#5628/D-23 2BHK Ground Floor, 4th Main, 6th Cross (Left) East Facing Near Indoor Nehuru Stadium, S.S Badavane B Block, House Name SHIVARATNA
94489 29509

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**BOSCH DEALER WANTS**
Auto Electrician to repair starters, Alternators along with knowledge of wiring for all vehicles on piece work basis.
*Scientific Fuel Injections*
Next to Hotel Shoven (Kini Towers) P.B.Road, Davangere.
PH: 98457 81414

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ಇಂದು ದಿ. 4.9.2024ರ ಬುಧವಾರ
ನಾಳೆ ದಿ. 5.9.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ 6:30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಫೋ. : 98451 04109

**FULLY AUTOMATIC**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್
1000/- Rs. Off
ಸೇಲ್ಸ್, ಸರ್ವೀಸ್‌ಗಾಗಿ
ಮರುತ್ ಎಂಟರ್ ಪ್ರೈಸಸ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

**3 BHK House on Rent**
Vastu-based, East-facing House for Vegetarians' residence, Students, Mess, PG Center, Children School, Music-Dance School, Yoga School, Gym etc.
Housing Board Colony, Beside Medical Hostel, Extended MCC 'B' Block.
*Students (Ladies) welcome.*
Mob. 6301558346

**ಕೆಲಸಕ್ಕೆ ಬೇಕಾಗಿದ್ದಾರೆ**
ಅಗ್ರಿಕಲ್ಚರ್ ಇಕ್ವಿಪ್‌ಮೆಂಟ್ ಮಾರ್ಕೆಟಿಂಗ್ ಮತ್ತು ಸರ್ವೀಸ್‌ಗೆ ಹುಡುಗರು ಬೇಕಾಗಿದ್ದಾರೆ.
ವಿಳಾಸ : ಚಿವೆನ್ಸ್ ಸ್ಕ್ವಯರ್,
ಲೋಕಿಕೆರೆ ರೋಡ್, ಚೌಡಮ್ಮ ದೇವಸ್ಥಾನದ ಎದುರು, ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
ಮೊ : 93410 12025

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಕ್ಲೀನರ್, ಸಪ್ಲೈಯರ್, ಹೆಲ್ಪರ್, ಬೇಕಾಗಿದ್ದಾರೆ.
ಕೂಡಲೇ ಕೆಳಗಿನ ನಂಬರಿಗೆ ಸಂಪರ್ಕಿಸಿ
96328 03555

**ಮನೆ ಬಾಡಿಗೆಗೆ ಇದೆ**
ವಿಜಯನಗರ ಬಡಾವಣೆ, 3ನೇ ಮೇನ್, 9ನೇ ಕ್ರಾಸ್, ನ್ಯೂ ಆರ್‌ಟಿಒ ಆಫೀಸ್ ಹತ್ತಿರ, ಡಬಲ್ ಬೆಡ್ ರೂಂ ಮನೆ, 2ನೇ ಫ್ಲೋರ್, ದಾವಣಗೆರೆ.
96200 20530

**Reputed Footware Company showroom**
Requires Sales Executuve-1 Post.
Qual : SSLC/PUC
LIBERTY SHOES LTD.,
Opp. SS mall, Shamanur Road, Davangere.
99019 44554, 98801 56060

**KAIDB**
Furniture Factory for Rent,
Davanagere. 4000 Sqft.
98459 77475

**ಹೊಸ ಜೀವನ**
ವಿಶ್ವಕರ್ಮ ಅಚಾರಿ 60 ವರ್ಷದ ಕೇಂದ್ರ ಸರ್ಕಾರಿ ನೌಕರಿಯಿಂದ ನಿವೃತ್ತಿ ಹೊಂದಿದ ವಿಚ್ಛೇದಿತನಿಗೆ ಯಾವುದೇ ಜಾತಿಯ ಜೀವನ ಸಂಗಾತಿಯಾಗುಯವ ವಿಧವೆ, ವಿಚ್ಛೇದಿತೆ ಬೇಕಾಗಿದೆ ಸಂಪರ್ಕಿಸಿ.
98807 29108

**WANTED**
Accountent Required
Qualification : B.Com
1 Year Experience
Contact :
9916429793
Near DC office, Davangere

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಸೊಳ್ಳೆ ಮೆಷ್ ಹಾಕುತ್ತೇವೆ**
ನಮ್ಮಲ್ಲಿ ಸೊಳ್ಳೆ ಮೆಷ್ ಹಾಗೂ ಎಲ್ಲಾ ತರಹದ ಸೋಫಾ, ಕುಷನ್, ಸ್ಪಂಜ್ ಬೆಡ್ ಹಾಗೂ ವುಡ್ ಪಾಲೀಶ್ ಹಾಕಲಾಗುವುದು. ನಮ್ಮಲ್ಲಿ ಕಡಿಮೆ ಬೆಲೆಯಲ್ಲಿ ಹಳೇ ಸೋಫಾ ಸಿಗುತ್ತವೆ.
88614 38237

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**2 BHK HOUSE FOR RENT**
Specious, as per Vastu Constructed Double Bed Rooms House In 1st Floor Available For Rent. (Veg Only)
63615 93954

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
ಎಸ್.ಎಸ್.ಎಲ್.ಸಿ ಪಾಸ್/ ಫೇಲಾಗಿರುವವರು ಸೇಲ್ಸ್ ಮೆನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು
ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಬೇಕಾಗಿದ್ದಾರೆ**
ಎಸ್.ಎಸ್.ಎಲ್.ಸಿ ಪಾಸ್/ ಫೇಲಾಗಿರುವವರು ಸೇಲ್ಸ್ ಮೆನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು
ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**REQUIRED**
For doctor MBBS or BAMS clinic morning time
KANTESH MEDICALS
RMC link Road, Bamboo bazaar Davangere.
+91 86181 02902

**KHB ಸೈಟ್ ಮಾರಾಟಕ್ಕಿದೆ**
ಹರಿಹರ-ಶೇರಾಪುರದಲ್ಲಿರುವ 30x40ರ ಅಳತೆಯ ಉತ್ತರಾಭಿಮುಖದ ಸೈಟ್ ಮಾರಾಟಕ್ಕಿದೆ.
98444 97008
70194 19268

**ಜಮೀನು ಮಾರಾಟಕ್ಕಿದೆ**
ಹೌಸಿಂಗ್ ಬೋರ್ಡ್‌ನಿಂದ $2\frac{1}{2}$ ಕಿ.ಮೀ. ದಾವಣಗೆರೆಯಿಂದ 10 ಕಿ.ಮೀ. ದೂರದಲ್ಲಿರುವ ಮೂರು ಮುಕ್ಕಾಲು ಎಕರೆ, ರಸ್ತೆಯ ಪಕ್ಕದಲ್ಲೇ ಇರುವ ಜಮೀನು ಮಾರಾಟಕ್ಕಿದೆ.
9632030161, 95380 24422

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 2 ಹುಡುಗರು (9am to 8pm) ಟ್ಯಾಲಿ ಅನುಭವವುಳ್ಳ ಮತ್ತು ಸ್ಟಾಕ್ಸ್ ಮೆಂಟೇನ್ ಮಾಡಲು 2 ಮಹಿಳೆಯರು (10am to 7pm)
ಕಶೆಟ್ಟಿರ್ ಇಂಡಸ್ಟ್ರಿಯಲ್
ಲಾಯರ್ ರೋಡ್, ದಾವಣಗೆರೆ.

**REQUIRED**
for doctor MBBS or BAMS clinic morning time
KANTESH MEDICALS
RMC link Road, Boombum bazaar Davangere.
+91 86181 02902

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water. (Only for Veg)
Vidyanagar last city bus stop, Davangere
8951938228, 8050222181

**ಮಳಿಗೆಗಳು ಬಾಡಿಗೆಗಿದೆ**
900 sqft. ಶಾಮನೂರು ರೋಡ್ ಎಸ್.ಎಸ್. ಮಾಲ್ ಹತ್ತಿರ ಸಾಯಿ ರಾಂ ಕಾಂಪ್ಲೆಕ್ಸ್, ದಾವಣಗೆರೆ.
90082 20077
90084 88097

# ಮಹಿಳೆಯರ ಸುರಕ್ಷತೆಗಾಗಿ ಶಾಸನಗಳನ್ನು ಜಾರಿಗೆ ತರದ ಪ್ರಧಾನಿ

## ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ರಾಜೀನಾಮೆಗೆ ಮಮತಾ ಆಗ್ರಹ

ಕೊಲ್ಕೊತಾ, ಸೆ. 3 - ಮಹಿಳೆಯರ ಸುರಕ್ಷತೆಗಾಗಿ ಪರಿಣಾಮಕಾರಿ ಶಾಸನಗಳನ್ನು ಜಾರಿಗೆ ತರದೇ ಇರುವ ಕಾರಣಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಒತ್ತಾಯಿಸಿದ್ದಾರೆ.


ಪಶ್ಚಿಮ ಬಂಗಾಳದ ವಿಧಾನಸಭೆ ಯಲ್ಲಿ ಅಪರಾಜಿತ (ಮಹಿಳಾ ಮತ್ತು ಮಕ್ಕಳ ಪಶ್ಚಿಮ ಬಂಗಾಳ ಅಪರಾಧಿಕ ಕಾಯ್ದೆಗಳು ಹಾಗೂ ತಿದ್ದುಪಡಿ) ಮಸೂದೆ 2024 ಅನ್ನು ಮಂಡಿಸಿದ ನಂತರ ಅವರು ಮಾತನಾಡಿದರು.

ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಲು ಹಾಗೂ ಸಂತ್ರಸ್ತರಿಗೆ ತ್ವರಿತ ನ್ಯಾಯ ಒದಗಿಸಲು ಕಠಿಣ ಅಂಶಗಳಿರುವ ಕಾಯ್ದೆ ಜಾರಿಗೆ ತರುವಂತೆ ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದ್ದೆವು. ಆದರೆ, ಕೇಂದ್ರ ಸರ್ಕಾರ ಈ ಬಗ್ಗೆ ಯಾವುದೇ ಉತ್ಸಾಹ ತೋರಲಿಲ್ಲ. ಹೀಗಾಗಿ ನಾವೇ ಮೊದಲ ಹೆಜ್ಜೆ ಇಟ್ಟಿದ್ದೇವೆ. ಈ ಮಸೂದೆ ಜಾರಿಗೆ ಬಂದ ನಂತರ ದೇಶಕ್ಕೇ ಮಾದರಿಯಾಗಲಿದೆ ಎಂದು ಮಮತಾ ಬ್ಯಾನರ್ಜಿ ಹೇಳಿದರು.

ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗಾಗಿ ಪರಿಣಾಮ ಕಾರಿ ಕಾಯ್ದೆಯನ್ನು ಜಾರಿಗೆ ತರಲು ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಷಾ ಹಾಗೂ ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳು ವಿಫಲರಾಗಿದ್ದಾರೆ. ಅವರೆಲ್ಲರೂ ರಾಜೀನಾಮೆ ನೀಡಬೇಕು ಎಂದು ಮಮತಾ ಬ್ಯಾನರ್ಜಿ ಒತ್ತಾಯಿಸಿದರು. ಅತ್ಯಾಚಾರ ಮಾನವೀಯತೆಗೆ ಅಂಟಿರುವ ಶಾಪ ಮತ್ತು ಇಂತಹ ಅಪರಾಧಗಳನ್ನು ತಡೆಯಲು ಸಾಮಾಜಿಕ ಸುಧಾರಣೆಗಳ ಅಗತ್ಯವಿದೆ ಎಂದವರು ಹೇಳಿದರು.

ಈ ಮಸೂದೆ ಜಾರಿಗೆ ಬಂದ ನಂತರ ರಾಜ್ಯದಲ್ಲಿ ಅಪರಾಜಿತ ಹೆಸರಿನಲ್ಲಿ ವಿಶೇಷ ಕಾರ್ಯಪಡೆ ಆರಂಭಿಸಲಾಗುವುದು. ಈ ಕಾರ್ಯ ಪಡೆಯು ಪೊಲೀಸರ ಜೊತೆ ಕಾರ್ಯನಿರ್ವಹಿಸಲಿದೆ ಹಾಗೂ ಕಾಲಮಿತಿಯಲ್ಲಿ ತನಿಖೆ ಪೂರ್ಣಗೊಳಿಸಲಿದೆ ಎಂದು ಮುಖ್ಯಮಂತ್ರಿ ಹೇಳಿದರು.


# ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಕೃಷ್ಣ-ರಾಧೆಯರಂತೆ ಮುದ್ದು ಪುಟಾಣಿಗಳು.....



ಧನವಿಕ
ತಂದೆ : ನವೀನ್‌ಕುಮಾರ್
ತಾಯಿ : ಬಿಂದು ಕೆ. ಮಾಯಕೊಂಡ




ವಿಸ್ಮಯ
ತಂದೆ : ಟಿ.ಎಸ್. ರುದ್ರೇಶ್
ತಾಯಿ : ವಾಣಿಶ್ರೀ



ಪಾಪು
ತಂದೆ : ವೆಂಕಟೇಶ್
ತಾಯಿ : ರೇಣುಕಾ



ಶತಾಕ್ಷಿ
ತಂದೆ : ದರ್ಶನ್ ಬಿ.ರಾಜ್
ತಾಯಿ : ಲಕ್ಷ್ಮಿ ಡಿ. ರಾಜ್



ಹರಿಣಿ ಜಿ. ಜವಳಿ
ತಂದೆ : ಗುರುಬಸವರಾಜ್ ಜೆ.ಕೆ.
ತಾಯಿ : ನಿವೇದಿತ ಐ.ಜೆ.



ಸಿ.ಕೆ. ಗುರುಪ್ರಸಾದ್
ತಂದೆ : ಎಂ. ಚಿದಾನಂದ ಕಂಚಿಕೇರಿ
ತಾಯಿ : ಟಿ. ಯಶೋಧ ಕಂಚಿಕೇರಿ

# ಜಿಲ್ಲಾ ಬಿಜೆಪಿ ವತಿಯಿಂದ ಸದಸ್ಯತ್ವ ಅಭಿಯಾನ



ದಾವಣಗೆರೆ, ಸೆ.3- ಜಿಲ್ಲಾ ಬಿಜೆಪಿ ವತಿಯಿಂದ ನಗರದ ಬಿಜೆಪಿ ಕಚೇರಿಯಲ್ಲಿ ಸದಸ್ಯತ್ವ ಅಭಿಯಾನ ಕಾರ್ಯಕ್ರಮವು ಇಂದು ನಡೆಯಿತು.

ಲೋಕಸಭಾ ಕ್ಷೇತ್ರದ ಬಿಜೆಪಿ ಮುಖಂಡರಾದ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಸಭೆಯಲ್ಲಿ ಭಾಗವಹಿಸಿ, ಸದಸ್ಯತ್ವ ಅಭಿಯಾನದಲ್ಲಿ ಸದಸ್ಯರಾಗಿ ಬಲಿಷ್ಠ ಭಾರತ ರೂಪಿಸುವಲ್ಲಿ ಶ್ರಮಿಸೋಣ ಎಂದು ಹೇಳಿದರು.

ಮುಖಂಡರುಗಳಾದ ಯಶವಂತ ರಾವ್ ಜಾಧವ್, ಶ್ರೀನಿವಾಸ ದಾಸಕರಿಯಪ್ಪ, ಕೊಳೇನಹಳ್ಳಿ ಸತೀಶ್, ಜಯಮ್ಮ, ರಮೇಶ ನಾಯ್ಕ, ಗುರುಪ್ರಸಾದ್, ವಿಜಯ ಕುಮಾರ, ನಜೀರ್ ಅಹಮ್ಮದ್, ಕಿಶೋರ್ ಮತ್ತು ಇತರರು ಸಭೆಯಲ್ಲಿ ಹಾಜರಿದ್ದರು.

# ಹರಪನಹಳ್ಳಿ: ಸರ್ಕಾರಿ ಶಾಲೆಗಳಿಗೆ ವಿವಿಧ ಉಪಕರಣಗಳ ವಿತರಣೆ



ಹರಪನಹಳ್ಳಿ,ಆ.3- ಬೆಂಗಳೂರಿನ ಶ್ರೀ ಕುಮಾರಸ್ವಾಮಿ ಮಿನರಲ್ ಎಕ್ಸ್‌ಪೋರ್ಟ್ ಸಂಸ್ಥೆ ವತಿಯಿಂದ ತಾಲ್ಲೂಕಿನ ವಿವಿಧ ಸರ್ಕಾರಿ ಶಾಲೆಗಳಿಗೆ ಉಚಿತವಾಗಿ ವಿವಿಧ ಉಪಕರಣಗಳನ್ನು ವಿತರಿಸಲಾಯಿತು.

ತಾಲ್ಲೂಕಿನ ಅಳಗಂಚಿಕೇರಿ, ತಲವಾಗಲು, ಗುಂಡಗತ್ತಿ ಮತ್ತು ಯಡಿಹಳ್ಳಿ ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್, ಪ್ರಿಂಟರ್ ಮತ್ತು ಶುದ್ಧ ಕುಡಿಯುವ ನೀರಿನ ಘಟಕ (ಆರ್‌ಓ ಪ್ಲಾಂಟ್)ಗಳನ್ನು ಕೊಡುಗೆಯಾಗಿ ನೀಡಲಾಯಿತು.

ಈ ವೇಳೆ ಮಾತನಾಡಿದ ಎಸ್‌ಕೆಎಂಇಪಿಎಲ್‌ನ ಘಟಕದ ಮುಖ್ಯಸ್ಥ ಶಿರಬಿ ಪ್ರಕಾಶ್, ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿಯಡಿಯಲ್ಲಿ ನಮ್ಮ ಸಂಸ್ಥೆಯು ಇಂತಹ ಸೇವಾ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಭಾಗದಲ್ಲಿ ಮೂಲ ಸೌಕರ್ಯದ ಕೊರತೆ ಇರುವ ಸರ್ಕಾರಿ ಶಾಲೆಗಳಿಗೆ ನಮ್ಮ ಸಂಸ್ಥೆಯಿಂದ ವಿವಿಧ ಉಪಕರಣಗಳನ್ನು ನೀಡಿದ್ದೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಮಕ್ಕಳು ಇದ್ದರು.

# ಅಂಚೆ ಕುಂಚ ಚಿತ್ರ ಬರೆಯುವ ಸ್ಪರ್ಧೆ

ದಾವಣಗೆರೆ, ಸೆ. 3 - ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಶ್ರೀ ಗಣೇಶೋತ್ಸವದ ಪ್ರಯುಕ್ತ 50 ಪೈಸೆ ಅಂಚೆ ಕಾರ್ಡಿನಲ್ಲಿ ಶ್ರೀ ಗಣೇಶನ ಚಿತ್ರ ಬರೆಯುವ ರಾಜ್ಯ ಮಟ್ಟದ ಉಚಿತ ಚಿತ್ರ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ವಿವಿಧ ಕಲಾ ಪ್ರಕಾರಗಳಲ್ಲಿ ಶ್ರೀ ಗಣಪತಿ ಚಿತ್ರ ಬರೆಯಬಹುದು. ಚಿತ್ರ ಬರೆದು ಕಳಿಸುವ ವಿಳಾಸ ಕಲಾ ಕುಂಚ #588, 'ಕನ್ನಡ ಕೃಪ', ಮೊದಲನೇ ಮಹಡಿ, ಕುವೆಂಪು ರಸ್ತೆ, ಕಸ್ತೂರ್ಬಾ ಬಡಾವಣೆ, ದಾವಣಗೆರೆ - 577002.

ಹೆಚ್ಚಿನ ಮಾಹಿತಿಗೆ 95387 32777 ಸಂಪರ್ಕಿಸಬಹುದು.

ಚಿತ್ರ ಬರೆದು ಕಳಿಸುವ ಕೊನೆಯ ದಿನಾಂಕ 15 ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ.ಸಿ. ಉಮೇಶ್ ತಿಳಿಸಿದ್ದಾರೆ.

# ಜಿಲ್ಲೆಯ 18 ಜನರಿಗೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ

ದಾವಣಗೆರೆ, ಸೆ.3- ಪ್ರತಿ ವರ್ಷ ಶಿಕ್ಷಕರ ದಿನಾಚರಣೆಯಂದು ಜಿಲ್ಲಾಡಳಿತದ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ಕೊಡಮಾಡುವ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗಗಳಿಂದ ಒಟ್ಟು 18 ಜನ ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ.

ನಾಡಿದ್ದು ದಿನಾಂಕ 5ರ ಗುರುವಾರ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಜಿಲ್ಲಾಡಳಿತದಿಂದ ಏರ್ಪಾಡಾಗಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಿ, ಗೌರವಿಸಲಾಗುತ್ತದೆ ಎಂದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಆಡಳಿತ ವಿಭಾಗದ ಉಪ ನಿರ್ದೇಶಕರು ತಿಳಿಸಿದ್ದಾರೆ.

**ಕಿರಿಯ ಪ್ರಾಥಮಿಕ ಶಾಲಾ ವಿಭಾಗ**

ದಾವಣಗೆರೆ ಉತ್ತರ ವಲಯ : ಕದರಪ್ಪನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಬಿ.ಎಸ್. ಉಷಾ.

ದಾವಣಗೆರೆ ದಕ್ಷಿಣ ವಲಯ : ದಾವಣಗೆರೆಯ ವೆಂಕಟೇಶ್ವರ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಹೆಚ್.ಆರ್. ಪ್ರಕಾಶ್.

ಚನ್ನಗಿರಿ : ಚನ್ನಗಿರಿಯ ಫಾರೂಕಿ ನಗರದಲ್ಲಿರುವ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ಆಶಿಯಾ ಫರ್ವಿನ್.

ಹರಿಹರ : ಹರಿಹರ ತಾಲ್ಲೂಕಿನ ಧೂಳೆಹೊಳೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ಯಶೋಧ ಬಾರ್ಕಿ.

ಜಗಳೂರು : ಜಗಳೂರು ತಾಲ್ಲೂಕಿನ ಉದ್ದಬೋರನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಜಿ.ಎಸ್. ಸಂಗಮೇಶ್.

ಹೊನ್ನಾಳಿ : ಹೊನ್ನಾಳಿ ತಾಲ್ಲೂಕಿನ ಹೊಳೆಮಾದಾಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಜಿ.ಸಿ. ಶಿವಪ್ರಸಾದ್ ಕುಮಾರ್.

**ಹಿರಿಯ ಪ್ರಾಥಮಿಕ ಶಾಲಾ ವಿಭಾಗ**

ದಾವಣಗೆರೆ ಉತ್ತರ ವಲಯ : ದಾವಣಗೆರೆ ಕೆ. ಆರ್. ಮಾರ್ಕೆಟ್‌ನಲ್ಲಿರುವ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ರೇಷ್ಮಾ ಬಾನು.

ದಾವಣಗೆರೆ ದಕ್ಷಿಣ ವಲಯ : ದಾವಣಗೆರೆ ತಾಲ್ಲೂಕಿನ ಗೋಪನಾಳ್ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಪಿ.ಆರ್. ಮಲ್ಲಿಕಾರ್ಜುನಯ್ಯ.

ಚನ್ನಗಿರಿ : ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಗ್ರಾಮದ ಸರ್ಕಾರಿ ಬಾಲಕರ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಶ್ರೀಮತಿ ನಸೀಮಾ ಬಾನು.

ಹರಿಹರ : ಹರಿಹರ ತಾಲ್ಲೂಕಿನ ಭಾನುವಳ್ಳಿ ಗ್ರಾಮದ ಕೆ.ಪಿ.ಎಸ್. ಪ್ರಾಥಮಿಕ ಶಾಲೆಯ ಚಿತ್ರಕಲಾ ಶಿಕ್ಷಕ ಆರ್. ಶಿವಕುಮಾರ್.

ಜಗಳೂರು : ಜಗಳೂರು ತಾಲ್ಲೂಕಿನ ಬಿಳಿಚೋಡು ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಮುಖ್ಯ ಶಿಕ್ಷಕ ಪಿ.ನಾಗೇಂದ್ರಪ್ಪ.

ಹೊನ್ನಾಳಿ : ಹೊನ್ನಾಳಿ ತಾಲ್ಲೂಕಿನ ಬೀರಗೊಂಡನ ಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ಕೆ.ಆರ್. ಶೋಭಾ.

**ಪ್ರೌಢಶಾಲಾ ವಿಭಾಗ**

ದಾವಣಗೆರೆ ಉತ್ತರ ವಲಯ : ದಾವಣಗೆರೆ ಆಜಾದ್ ನಗರದಲ್ಲಿರುವ ಎಸ್.ಎಸ್.ಪಿ. ಉರ್ದು ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕಿ ಶ್ರೀಮತಿ ನರೇನಾ ಬಾನು.

ದಾವಣಗೆರೆ ದಕ್ಷಿಣ ವಲಯ : ದಾವಣಗೆರೆ ತಾಲ್ಲೂಕಿನ ಮಾಯಕೊಂಡ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಶಿಕ್ಷಕಿ ಶ್ರೀಮತಿ ಬಿ.ಹೆಚ್. ಲೀಲಾವತಿ.

ಚನ್ನಗಿರಿ : ಚನ್ನಗಿರಿ ತಾಲ್ಲೂಕಿನ ಹಾರೋನಹಳ್ಳಿ ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಎನ್. ಹಾಲೇಶಪ್ಪ.

ಹರಿಹರ : ಹರಿಹರ ತಾಲ್ಲೂಕಿನ ಕಡಾರನಾಯ್ಕನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಡಿ.ಎಸ್.ವೆಂಕಟೇಶ್ ರಾವ್.

ಜಗಳೂರು : ಜಗಳೂರು ತಾಲ್ಲೂಕಿನ ಗುರುಸಿದ್ದಾಪುರದ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ವಿಶ್ವನಾಥ್ ಜಂಬಗಿ.

ಹೊನ್ನಾಳಿ : ಹೊನ್ನಾಳಿ ತಾಲ್ಲೂಕಿನ ನ್ಯಾಮತಿಯ ಕರ್ನಾಟಕ ಪಬ್ಲಿಕ್ ಶಾಲೆಯ ಸಹ ಶಿಕ್ಷಕ ಕೃಷ್ಣಾ ನಾಯ್ಕ.

# ಪತ್ರಕರ್ತರ ಸಂಘದಿಂದ ಪತ್ರಕರ್ತರ ಪ್ರತಿಭಾನ್ವಿತ ಮಕ್ಕಳಿಗೆ ಪುರಸ್ಕಾರ

ದಾವಣಗೆರೆ, ಸೆ. 3 - ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ ದಾವಣಗೆರೆ ಜಿಲ್ಲೆಯ ಪತ್ರಕರ್ತರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ತಿಳಿಸಿದ್ದಾರೆ.

2023-24ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 70ಕ್ಕೂ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವ ಪತ್ರಕರ್ತರ ಮಕ್ಕಳು ದಾವಣಗೆರೆ ಜಿಲ್ಲಾ ಮಟ್ಟದ ಪುರಸ್ಕಾರಕ್ಕೆ ಅರ್ಹರಾಗಿರುತ್ತಾರೆ. ಎಸ್ಸೆಸ್ಸೆಲ್ಸಿ ಮಕ್ಕಳನ್ನು 'ವಿದ್ಯಾಸಿರಿ' ಪ್ರಶಸ್ತಿಯೊಂದಿಗೆ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ. 70ಕ್ಕೂ ಹೆಚ್ಚು ಅಂಕಗಳನ್ನು ಪಡೆದ ಮಕ್ಕಳನ್ನು 'ವಿದ್ಯಾರತ್ನ' ಪ್ರಶಸ್ತಿಯೊಂದಿಗೆ ಸನ್ಮಾನಿಸಿ, ಸ್ಮರಣಿಕೆ, ಫಲ-ಪುಷ್ಪದೊಂದಿಗೆ ಗೌರವಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಪ್ರಥಮ ಭಾಷೆ ಕನ್ನಡದಲ್ಲಿ 125ಕ್ಕೆ 120ಕ್ಕೂ ಹೆಚ್ಚು ಅಂಕಗಳನ್ನು ಪಡೆದ ಪತ್ರಕರ್ತರ ಮಕ್ಕಳನ್ನು ವಿಶೇಷವಾಗಿ ಪುರಸ್ಕರಿಸಲಾಗುತ್ತದೆ ಎಂದು ಮಂಜುನಾಥ ವಿವರಿಸಿದ್ದಾರೆ. ಅರ್ಹ ಪತ್ರಕರ್ತರ ಮಕ್ಕಳು, ಸ್ವ-ವಿವರ, ಭಾವಚಿತ್ರ, ಅಂಕಪಟ್ಟಿ ಜೆರಾಕ್ಸ್ ಪ್ರತಿಯೊಂದಿಗೆ ಇದೇ ದಿನಾಂಕ 6ರೊಳಗಾಗಿ ಸಲ್ಲಿಸಬೇಕು. ಆಯ್ಕೆಯಾದ ವಿದ್ಯಾರ್ಥಿಗಳನ್ನು ಬರುವ ಸೆಪ್ಟೆಂಬರ್ 13ರಂದು ನಡೆಯುವ ಸಮಾರಂಭದಲ್ಲಿ ಪುರಸ್ಕರಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ವಿಳಾಸ : ಎ. ಫಕೃದ್ದೀನ್, ಪ್ರಧಾನ ಕಾರ್ಯದರ್ಶಿ, ಸಂಪಾದಕರು, 'ಇಮೇಜ್' ಪತ್ರಿಕಾ ಕಾರ್ಯಾಲಯ, ನಾಯಕ ವಿದ್ಯಾರ್ಥಿ ನಿಲಯದ ಎದುರಿನ ಮಹಾನಗರ ಪಾಲಿಕೆ ಕಾಂಪ್ಲೆಕ್ಸ್, ಪಿ.ಜೆ. ಬಡಾವಣೆ, ದಾವಣಗೆರೆ. ವಿವರಕ್ಕೆ 94482-77772, ಅಥವಾ 86180-02539 ಅಥವಾ 94487 28858ರಲ್ಲಿ ಸಂಪರ್ಕಿಸಲು ಖಜಾಂಚಿ ಎನ್.ವಿ. ಬದರಿನಾಥ್ ತಿಳಿಸಿದ್ದಾರೆ.

# ಬೆಳಲಗೆರೆ : ವೀರಭದ್ರೇಶ್ವರ ಜಯಂತ್ಯೋತ್ಸವ



ಮಲೇಬೆನ್ನೂರು, ಸೆ.3- ಬೆಳಲಗೆರೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನ ದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಜಯಂತಿಯನ್ನು ಆಚರಿಸ ಲಾಯಿತು. ಮುಖಂಡರಾದ ಹೆಚ್.ರುದ್ರಮನಿಯಪ್ಪ, ಬಿ.ಎಂ.ಹಾಲೇಶಪ್ಪ, ಆರ್. ಮೂರ್ತ್ಯಪ್ಪ, ಬಿ.ಹೆಚ್.ನಾಗರಾಜ್, ಎಸ್.ಬಸಟೆಪ್ಪ, ಎಂ.ಹಾಲೇಶಪ್ಪ, ಎಸ್. ಎಸ್.ಹಾಲೇಶ್, ಟಿ.ಎಸ್.ಬಸವರಾಜ್ ಮತ್ತು ಇತರರು ಭಾಗವಹಿಸಿದ್ದರು.

ORGANISING
SEHEJ
Exibition Cum Food Mela
On 23rd September Monday
At Bapuji Samudaya Bhavan
For booking stalls Last Date : 20.09.2024
Contact:98444 41989, 84316 15003

**IN THE HIGH COURT OF KARNATAKA AT BENGALURU Notice to the Respondent No.1 & 2, vide Court Order dated: 19.08.2024 WRIT PETITION NO.964/2022 (L-RES)**

PETITIONERS: THE MANAGING DIRECTOR, BHADRA SAHAKARI SAKKARE KARKHANE NIYAMITHA, DODDABATHI, DAVANAGERE DIST-577566. (SRI. VIRUPAKSHAIAH P.H, ADV) V/S RESPONDENTS: 1. THE PRESIDENT, CHITRADURGA DISTRICT MAJDUR SANGH (REGD.), DAVANAGERE-577001. AND ANOTHER

TO

THE PRESIDENT, CHITRADURGA DISTRICT MAJDUR SANGH (REGD.), DAVANAGERE -577001. **RESPONDENT NO.1** BHADRA SAHAKARI SAKKARE KHARKANE NOWKARARA MATTU KARMIKARA SANGHA, NEELANAHALLI, DODDABATHI, DAVANAGERE TALUK, DAVANAGERE DIST-577566, REP. BY ITS PRESIDENT.**RESPONDENT NO.2**

WHEREAS the Writ Petition filed by the above named petitioner under Article 226 & 227 of the Constitution of India, prayed to Direction in the similar nature quashing the Award dated 08.08.2018 in I.D.No.143/2009 vide Annexure-N, passed by the Industrial Tribunal, Hubballi.

Notice is hereby given to you to appear in this Court either in person or through Counsel duly instructed or through some one authorized by law, to Act for you in the above Writ Petition on 18.09.2024 at 10.30 A.M. in case you Intend to contest the Writ petition. If you fail to appear, the same will be dealt With, heard and decided in your absence.

Issued under my hand and the seal of this Court, this 19TH day of AUGUST, 2024.

**By Order of the Court**
**Assistant Registrar.**

DN : 22.08.2024.

# ಬಾಡಾ ಕ್ಲಸ್ಟರ್‌ನಲ್ಲಿ ಓದುವ ಅಭಿಯಾನದ ಆರಂಭ

## ತವರೂರಿನ ಪ್ರೌಢಶಾಲೆಗೆ ಅರ್ ಜಿ ಹಳ್ಳಿ ನಾಗರಾಜ್ ರಿಂದ 40 ಪುಸ್ತಕಗಳ ಕೊಡುಗೆ



ದಾವಣಗೆರೆ, ಸೆ. 3 - ಸರ್ಕಾರದ ಆದೇಶದಂತೆ ಓದುವ ಅಭಿಯಾನ ಕಾರ್ಯಕ್ರಮಕ್ಕೆ ಪೂರಕವಾಗಿ ರಾಮಗೊಂಡನಹಳ್ಳಿ ಸರ್ಕಾರಿ ಪ್ರೌಢಶಾಲೆ ಗೆ ಅದೇ ಊರಿನ ಹಿರಿಯ ಲೇಖಕರೂ ಆದ ಆರ್.ಜಿ. ಹಳ್ಳಿ ನಾಗರಾಜ್ ಮಕ್ಕಳು ಓದಬಹುದಾದ ಸುಮಾರು 40 ಪುಸ್ತಕಗಳನ್ನು ಉಚಿತವಾಗಿ ನೀಡಿದ್ದಾರೆ. ಇನ್ನೂ ಹೆಚ್ಚು ಪುಸ್ತಕಗಳನ್ನು ಕಳಿಸುವುದಾಗಿ ತಿಳಿಸಿ ಓದುವ ಹವ್ಯಾಸ ಬೆಳೆಸಿ ಎಂದು ಶಿಕ್ಷಕರಿಗೆ ತಿಳಿಸಿದ್ದಾರೆ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಬ್ಬೂರಿನಲ್ಲಿ ಮೊದಲನೇ ದಿನ ಗ್ರಂಥಾಲಯವನ್ನು ಸ್ವಚ್ಚತೆ ಮಾಡಿ ಹರಿದಿರುವ ಪುಸ್ತಕಗಳನ್ನು ಹೊಲಿಗೆ ಹಾಕಿ ಸರಿಪಡಿಸಿ ಓದು ಪ್ರಪಂಚ, ಕನ್ನಡ ಕ್ವಿಜ್ ಪುಸ್ತಕ ಗಳನ್ನು ಓದಿಸಲಾಯಿತು.

ಮುಖ್ಯ ಶಿಕ್ಷಕರಾದ ಕಲ್ಲೇಶಪ್ಪ ಸಿ.ಟಿ.ಯವರ ನೇತೃತ್ವದಲ್ಲಿ ಶಿಕ್ಷಕರಾದ ಕೆ. ಶಂಕರಪ್ಪ, ರೇಖಾ, ರೂಪಾ ಪ್ರಿಯಾಂಕ, ಗೀತಾ ರವರು ಓದುವ ಅಭಿಯಾನವನ್ನು ಆರಂಭಿಸಿದರು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಾಡಾದಲ್ಲಿ ಬೆಳಿಗ್ಗೆ 11 ಗಂಟೆಯಿಂದ 12 ಗಂಟೆಯವರೆಗೆ ಮಕ್ಕಳಿಗೆ ಶಾಲಾ ಗ್ರಂಥಾಲಯ ದಿಂದ ವಿವಿಧ ಪುಸ್ತಕಗಳನ್ನು, ದಿನ ಪತ್ರಿಕೆಗಳನ್ನು ಓದಿಸಲಾಯಿತು.

ಮುಖ್ಯ ಶಿಕ್ಷಕರಾದ ಸುಧಾ ಎಸ್.ಡಿ. ಯವರು ಮಕ್ಕಳಿಗೆ ಓದುವ ಪ್ರವೃತ್ತಿ ಹೆಚ್ಚಿಸುವ ಇಂತಹ ಕಾರ್ಯಗಳನ್ನು ಯಾಂತ್ರಿಕವಾಗಿ ಮಾಡದೇ ಪ್ರತಿ ನಿತ್ಯ ಶಾಲೆಯಲ್ಲಿ ಅಳವಡಿಸಿ ಕೊಳ್ಳುತ್ತೇವೆ. ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಕೂಡ ಓದುವ ಹವ್ಯಾಸವನ್ನು ಮಕ್ಕಳಲ್ಲಿ ಬೆಳೆಸಲು ಆಸಕ್ತಿ ಹೊಂದಿದ್ದಾರೆ ಎಂದು ತಿಳಿಸಿದರು.

ಶಿಕ್ಷಕರಾದ ಅಕ್ಕಮಹಾದೇವಿ, ಹಾಲಮ್ಮ, ಅಶ್ವಿನಿ ಎ, ರಮ್ಯಶ್ರೀ ಎನ್., ನಾಗರಾಜ ಕೆ., ರವಿಕುಮಾರ್ ರವರು ಮಕ್ಕಳಿಗೆ ಕುವೆಂಪು ವಿಚಾರಗಳು, ಈ ಸೋಪನ ನೀತಿ ಕಥೆಗಳು, ಆರೋಗ್ಯದಲ್ಲಿ ಯೋಗಾಸನ, ಪಂಚತಂತ್ರ ಕಥೆಗಳು, ಮೂಢನಂಬಿಕೆ ವಿರುದ್ಧ ಹೋರಾಟ, ಆವಂತಿ ಕಥೆಗಳ ಪುಸ್ತಕಗಳನ್ನು ಪರಿಚಯಿಸಿ ಓದಲು ಪ್ರೇರೇಪಿಸಿದರು.

ಕ್ಲಸ್ಟರ್‌ನ ವಿಠಲಾಪುರ, ಅಣಬೇರು ಹಾಗೂ ರಾಮಗೊಂಡನಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಓದುವ ಅಭಿಯಾನ ಪ್ರಾರಂಭವಾಯಿತು.

# ಶರಣರ ವಚನಗಳ ಅಧ್ಯಯನದಿಂದ ಮನಸ್ಸಿನ ನಿಯಂತ್ರಣ ಸಾಧ್ಯ



## 'ಕಲ್ಯಾಣದಿಂದ ಉಳವಿಯಡೆಗೆ' ಪ್ರವಚನ ಮಂಗಲೋತ್ಸವದಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ

ದಾವಣಗೆರೆ, ಸೆ. 3- ಬಸವಾದಿ ಶರಣರ ವಚನಗಳನ್ನು ಅಧ್ಯಯನ ಮಾಡಿ ಅದರಂತೆ ನಡೆದರೆ ಮಾನವನ ಮನಸ್ಸನ್ನು ನಿಯಂತ್ರಿಸಲು ಸಾಧ್ಯ. ಆಗ ಬದುಕು ಆಘಾತಕ್ಕೆ ಒಳಗಾಗುವುದಿಲ್ಲ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ವಿರಕ್ತಮಠದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಹಮ್ಮಿಕೊಂಡಿದ್ದ 'ಕಲ್ಯಾಣದಿಂದ ಉಳವಿಯಡೆಗೆ' ಪ್ರವಚನ ಮಂಗಲ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಮಾನವನ ಜೀವನ ತುಂಬಿದ ಬಂಡಿಯಂತೆ. ಈ ಬದುಕೆಂಬ ಬಂಡಿಯು ಇಂದು ನಿಯಂತ್ರಣ ತಪ್ಪಿ ಅಪಘಾತಕ್ಕೆ ಈಡಾಗುತ್ತಿದೆ. ಇದಕ್ಕೆ ಕಾರಣ ಬದುಕೆಂಬ ಬಂಡಿಯ ಗಾಲಿಗಳು ನಿಯಂತ್ರಣವಿಲ್ಲದ್ದರಿಂದ ಈ ಬದುಕು ಅಪಘಾತವಾಗಿದೆ. ಅವಸರವನ್ನು ಬಿಟ್ಟು ಸಮಾಧಾನವಾಗಿ ಚಲಿಸಬೇಕಾಗಿದೆ ಎಂದರು.

ಬಸವಾದಿ ಶಿವಶರಣರ ವಚನಗಳು ಜೀವನದ ಎಡರು ತೊಡರುಗಳನ್ನು, ಕಷ್ಟ-ನೋವುಗಳನ್ನು ಸಮಚಿತ್ತದಿಂದ ಎದುರಿಸುವ, ನೋವು-ನಲಿವನ್ನು ಹೊಗಳಿಕೆ-ತೆಗಳಿಕೆಯನ್ನು ಸಮದೃಷ್ಟಿಯಿಂದ ಕಾಣುವ ಕಲೆಯನ್ನು ಕಲಿಸುತ್ತದೆ. ಬದುಕು ಸುಗಮವಾಗಿ ಸಾಗಲು ಕಾಯಕ ಬೇಕು. ಆ ಕಾಯಕ ಯಾವುದಾದರೂ ಆಗಲಿ ಅದರೊಳಗೆ ಆನಂದವನ್ನು ಕಂಡರೆ ಅದಕ್ಕಿಂತ ಬೇರೆ ಕೈಲಾಸವಿಲ್ಲ ಎಂದು ಹೇಳಿದರು.

ಖಿನ್ನತೆ, ಅತಿಯಾದ ಹೊಯ್ದಾಟಕ್ಕೆ ಒಳಗಾದ ಇಂದಿನ ಯುವ ಸಮುದಾಯ, ದುಡಿಯುವ ಜನರು, ವ್ಯಾಪಾರಸ್ಥರು, ಗೃಹಿಣಿಯರು, ವೃತ್ತಿಪರರು, ವಿದ್ಯಾರ್ಥಿಗಳು ಹೀಗೆ ವಿವಿಧ ಸ್ತರದಲ್ಲಿರುವವರಿಗೂ ನಿರಾಳದ ಬದುಕಿಗೆ ಅಡಿಪಾಯವನ್ನು ಒದಗಿಸುತ್ತದೆ. ಶಾರೀರಿಕ ಆರೋಗ್ಯ ಪಡೆಯುವುದರಿಂದ ಮಾನಸಿಕ, ಸಾಮಾಜಿಕ, ಅಧ್ಯಾತ್ಮಿಕ ಆರೋಗ್ಯವನ್ನು ಸಾಧಿಸಿ, ನೆಮ್ಮದಿ, ಸಂತೃಪ್ತಿಯ ಜೀವನವನ್ನು ನಡೆಸಲು ನಮಗೆ ಬಸವಾದಿ ಶಿವಶರಣರ ವಚನಗಳು ಅಗತ್ಯ ಎಂದರು.

ಮನುಷ್ಯನ ಬದುಕಿಗೆ ಒಂದು ದಿನ ಸಾವಿದೆ. ಆ ಸಾವನ್ನು ಗೆಲ್ಲಬೇಕಾದರೆ ಬಸವಾದಿ ಶಿವಶರಣರ ಜೀವನ ಚರಿತ್ರೆಯನ್ನು ಯಾರು ಕೇಳುತ್ತಾರೋ ಅವರು ಸಾವನ್ನು ಗೆಲ್ಲುತ್ತಾರೆ. ಸಾವು ಗೆದ್ದು ಇಂದಿಗೂ ಬಸವಾದಿ ಶರಣರು ಬದುಕಿದ್ದಾರೆ. ಹಾಗಾಗಿ ಬಸವಾದಿ ಶರಣರು ಅಳಿದು ಹೋದ ಜೀವಗಳು ಅಲ್ಲ. ಉಳಿದ ಜೀವಗಳು ಅರ್ಥಾತ್ ಸಾವಿಲ್ಲದ ಜೀವಗಳು. ಅವರು ಸೂರ್ಯ-ಚಂದ್ರ ಇರುವವರೆಗೂ ಶಾಶ್ವತ ಚೇತನವಾಗಿದ್ದಾರೆ ಎಂದು ಹೇಳಿದರು.

ಪ್ರವಚನ ನೀಡಿದ ಮೈಸೂರು ಬಸವ ಧ್ಯಾನ ಮಂದಿರದ ಶ್ರೀ ಬಸವ ಲಿಂಗಮೂರ್ತಿ ಸ್ವಾಮೀಜಿ ಅವರು, ಕಲ್ಯಾಣದಿಂದ ಉಳವಿಯೆಡೆಗೆ ಪ್ರವಚನ ಕೇಳಲು ದಾವಣಗೆರೆಯ ಭಕ್ತರು ಪ್ರತಿದಿನವೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ್ದೀರಿ ಎಂದರು.

ಚಿತ್ರದುರ್ಗ ವೀರಶೈವ ಸಮಾಜದ ಸಹ ಕಾರ್ಯದರ್ಶಿ ಜಿತೇಂದ್ರ ಹುಲಿಕುಂಟೆ, ಚಿಂದೋಡಿ ವೀರಣ್ಣ, ಎಸ್.ಜಿ. ಸಂಗಪ್ಪ, ಶೋಭಾ ಪಲ್ಲಾಗಟ್ಟೆ, ಎಂ. ಜಯಕುಮಾರ್, ಅಂದನೂರು ಮುಪ್ಪಣ್ಣ, ಹಾಸಬಾವಿ ಕರಿಬಸಪ್ಪ ಮತ್ತಿತರರು ಭಾಗವಹಿಸಿದ್ದರು.

# ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಇವರು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ದಾವಣಗೆರೆ ಇವರ ನ್ಯಾಯಾಲಯದಲ್ಲಿ ದಾವಣಗೆರೆಯ ಆಜಾದ್ ನಗರದ 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆಯಲ್ಲಿರುವ ಡೋ. ನಂ.523/2ರಲ್ಲಿ ವಾಸವಾಗಿರುವ ಕೆ.ವೈ. ಇಮ್ರಾನ್ ಬಿನ್ ಯುಸೂಫ್‌ಸಾಬ್ ಇವರ ವಿರುದ್ಧ ಅಸಲು ದಾವೆ ಸಂಖ್ಯೆ 585/2024ರಲ್ಲಿ ತನಗೆ ಕೆ.ವೈ.ಇಮ್ರಾನ್ ಇವರಿಂದ ರೂ.4,42500-00 ಹಣ ಬಾಕಿ ಬರಬೇಕಾಗಿದೆಯೆಂದು ಮತ್ತು ದಾವೆ ಹೂಡಿದ ದಿನದಿಂದ ವಾರ್ಷಿಕವಾಗಿ ಶೇಕಡ 15 ದರದಲ್ಲಿ ಬಡ್ಡಿ ಹಾಗೂ ದಾವಾದ ಖರ್ಚುಗಳನ್ನು ಕೋರಿ ದಾವೆಯನ್ನು ಹೂಡಿದ್ದು, ದಾವೆಯಲ್ಲಿ ಕೆ.ವೈ.ಇಮ್ರಾನ್ ಇವರು ದಾವಣಗೆರೆಯ ಆಜಾದ್ ನಗರದ ಒಂದನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆಯಲ್ಲಿರುವ ಡೋ. ನಂ.524/3ರಲ್ಲಿ ವಿಸ್ತೀರ್ಣ 2.9 ಮೀಟರ್ x 9.10 ಮೀಟರ್‌ವುಳ್ಳ ಮಾಲೀಕತ್ವದ ಆಸ್ತಿಯನ್ನು ಮಾರಾಟ ಮಾಡದ ಹಾಗೆ ಕೇಸಿನಲ್ಲಿ ತಾತ್ಕಾಲಿಕ ಮುನಾಯಿ ಆದೇಶ ಹಾಗೂ ತೀರ್ಪಿಗೆ ಮುನ್ನ ಜಪ್ತಿ ಆದೇಶವನ್ನು ಕೋರಿ ಅರ್ಜಿಗಳನ್ನು ಸಲ್ಲಿಸಿದ್ದು, ಪ್ರಕರಣವು ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಬಾಕಿ ಇರುತ್ತದೆ. ಈಗ ನನ್ನ ಕಕ್ಷಿದಾರರಿಗೆ ಕೆ.ವೈ. ಇಮ್ರಾನ್ ಬಿನ್ ಯುಸೂಫ್‌ಸಾಬ್ ಇವರು ತರಾತುರಿಯಲ್ಲಿ ನನ್ನ ಕಕ್ಷಿದಾರರಿಗೆ ಬಾಕಿಯಾಗಿರುವ ಹಣಕ್ಕೆ ಬಾಧಕ ತರುವ ಸಲುವಾಗಿ ಮೇಲೆ ಹೇಳಲಾದ ಆಸ್ತಿಯನ್ನು ಮಾರಾಟ ಮಾಡುವ ಪ್ರಯತ್ನ ನಡೆಸಿರುತ್ತಾರೆಂದು ತಿಳಿದುಬಂದಿರುತ್ತದೆ. ಇದು ಅಕ್ರಮವಾಗಿರುತ್ತದೆ. ಆದ್ದರಿಂದ ಸಾರ್ವಜನಿಕರಿಗೆ ಈ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೇ, ದಾವಣಗೆರೆಯ ಆಜಾದ್ ನಗರದ ಒಂದನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, 3ನೇ ವಾರ್ಡ್ 3ನೇ ಡಿವಿಜನ್‌ನಲ್ಲಿರುವ ಡೋ.ನಂ.524/3ರಲ್ಲಿ ವಿಸ್ತೀರ್ಣ 2.9 ಮೀಟರ್ x 9.10 ಮೀಟರ್‌ವುಳ್ಳ ಆಸ್ತಿಗೆ **ಚಕ್ಕುಬಂದಿ : ಪೂರ್ವಕ್ಕೆ: ಕನ್ಸರ್‌ವೆನ್ಸಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಗ್ಯಾನಪ್ಪ ಇವರ ಮನೆ, ದಕ್ಷಿಣಕ್ಕೆ : ಜಮ್‌ಷಿದಾ ಕೋಂ.ರಫೀಕ್ ಇವರ ಮನೆ.** ಈ ಚಕ್ಕುಬಂಧಿಯೊಳಗಿನ ಆಸ್ತಿಯನ್ನು ಸಾರ್ವಜನಿಕರ‍್ಯಾರು ಖರೀದಿ ಮಾಡಬಾರದಾಗಿ ತಿಳಿಸಲಾಗಿದೆ. ಈ ಪ್ರಕಟಣೆಯನ್ನು ಗಮನಿಸಿಯೂ ಯಾರಾದರೂ ಖರೀದಿ ಮಾಡಿದಲ್ಲಿ ಅದಕ್ಕೆ ಅವರನ್ನು ಹೊಣೆಗಾರರನ್ನಾಗಿ ಮಾಡಿ ಅಸಲು ದಾವೆ ಸಂಖ್ಯೆ.585/2024 ರ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿ ಕಾನೂನು ಕ್ರಮ ಜರುಗಿಸುವವರಿರುತ್ತಾರೆ. ಆ ರೀತಿ ಮಾಡಿದ ವ್ಯವಹಾರವು ನಮ್ಮ ಕಕ್ಷಿದಾರರನ್ನು ಯಾವತ್ತೂ ಬಾಂದಾಯಿಸುವುದಿಲ್ಲ ತಿಳಿಯಿರಿ.

ವಕೀಲರು

**ದಿನಾಂಕ : 03.09.2024** **(ದಾದಾಪೀರ್ ಕೆ)** ಬಿ.ಕಾಂ; ಎಲ್‌ಎಲ್.ಬಿ.

**ಶ್ರೀಮತಿ ಹೆಚ್.ಪಿ. ಸಂಜೀದಾಬಾನು,** ಬಿ.ಎ; ಎಲ್‌ಎಲ್.ಬಿ.

9ನೇ ಮುಖ್ಯರಸ್ತೆ, ರಿಂಗ್ ರಸ್ತೆ ಹತ್ತಿರ, ಶಾಂತಿ ನಗರ, ದಾವಣಗೆರೆ. **ಮೊ : 98442 37851, 99160 36080**



# ವಿಜೃಂಭಣೆಯ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವ

ದಾವಣಗೆರೆ. ಸೆ. 3 - ನಗರದ ಅಶೋಕ ಚಿತ್ರಮಂದಿರದ ರೈಲ್ವೆ ಸೇತುವೆ ಬಳಿ ಇರುವ ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವವು ಇಂದು ಅದ್ದೂರಿಯಾಗಿ ಜರುಗಿತು. ರಥೋತ್ಸವ ಪ್ರಯುಕ್ತ ಶ್ರೀ ಸ್ವಾಮಿಗೆ ರುದ್ರಾಭಿಷೇಕ, ವಿಶೇಷ ಪೂಜೆಯನ್ನು ನೆರವೇರಿಸಲಾಯಿತು.

ರಥೋತ್ಸವದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ, ದೇವಸ್ಥಾನ ಕಮಿಟಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮಂಜಣ್ಣ, ಕಿರುವಾಡಿ ವಿ. ಸೋಮಶೇಖರ್, ಕೆ.ಜಿ. ಮಂಜುನಾಥ್, ಸುರೇಂದ್ರಪ್ಪ, ಕರೆಶಿವಪ್ಪ ಸಿದ್ದೇಶ್, ಪೈಲ್ವಾನ್ ನಾಗಪ್ಪನವರ್, ಕಿರುವಾಡಿ ಚಂದ್ರಶೇಖರ್, ವಾಸು ಸೋಮಶೇಖರ್ ಮತ್ತಿತರರು ರಥೋತ್ಸವದ ಮುಂದಾಳತ್ವ ವಹಿಸಿದ್ದರು. ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು.

# ಅತ್ಯಾಚಾರಿಗಳಿಗೆ ಮರಣದಂಡನೆ ಬಂಗಾಳದಲ್ಲಿ ಮಸೂದೆಗೆ ಅಂಗೀಕಾರ

ಕೊಲ್ಕೊತಾ, ಸೆ. 3- ಅತ್ಯಾಚಾರ ಪ್ರಕರಣಗಳಲ್ಲಿ ಹತ್ಯೆ ನಡೆದಿದ್ದಲ್ಲಿ ಮರಣದಂಡನೆ ವಿಧಿಸುವ ಮಸೂದೆಗೆ ಪಶ್ಚಿಮ ಬಂಗಾಳ ವಿಧಾನಸಭೆ ಸರ್ವಸಮ್ಮತಿಯ ಒಪ್ಪಿಗೆ ನೀಡಿದೆ. ಅಪರಾಜಿತ (ಮಹಿಳಾ ಮತ್ತು ಮಕ್ಕಳ ಪಶ್ಚಿಮ ಬಂಗಾಳ ಅಪರಾಧ ಕಾನೂನು ಹಾಗೂ ತಿದ್ದುಪಡಿ) ಮಸೂದೆ 2024ಕ್ಕೆ ವಿಧಾನಸಭೆ ಒಪ್ಪಿಗೆ ನೀಡಿದೆ.

ಈ ಮಸೂದೆಯ ಅನ್ವಯ ಅತ್ಯಾಚಾರ ಪ್ರಕರಣಗಳ ತನಿಖೆಯನ್ನು 21 ದಿನಗಳಲ್ಲಿ ಪೂರ್ಣಗೊಳಿಸಬೇಕಿದೆ. ವಿಚಾರಣೆಗೆ ಈ ಹಿಂದೆ ಎರಡು ತಿಂಗಳ ಗಡುವಿತ್ತು. ಪ್ರಕರಣದ ತನಿಖೆಗಾಗಿ ಮಹಿಳಾ ಅಧಿಕಾರಿಗಳನ್ನು ಒಳಗೊಂಡ ವಿಶೇಷ ಕಾರ್ಯಪಡೆ ಸಹ ರಚಿಸಲಾಗುವುದು.

ಈ ಮಸೂದೆಯ ಮೂಲಕ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಪೋಕ್ಸೋ ಕಾಯ್ದೆಗಳಿಗೆ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ. ಈ ಮಸೂದೆಗೆ ಅಂಗೀಕಾರ ಪಡೆಯಲು ರಾಜ್ಯ ಸರ್ಕಾರ ಎರಡು ದಿನಗಳ ವಿಶೇಷ ಅಧಿವೇಶನ ಕರೆದಿತ್ತು.

# ಭಾರತದ ಬೆಳವಣಿಗೆ ಶೇ.7ರಷ್ಟಿರಲಿದೆ

**ವಿಶ್ವ ಬ್ಯಾಂಕ್**

ನವದೆಹಲಿ, ಸೆ. 3 - ಭಾರತ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ. 7ರ ಆರ್ಥಿಕ ಬೆಳವಣಿಗೆ ಕಾಣಲಿದೆ ಎಂದು ವಿಶ್ವ ಬ್ಯಾಂಕ್ ಅಂದಾಜಿಸಿದೆ. ಈ ಹಿಂದೆ ಭಾರತದ ಬೆಳವಣಿಗೆ ದರ ಶೇಕಡ 6.6ರಷ್ಟಿರಲಿದೆ ಎಂದು ವಿಶ್ವ ಬ್ಯಾಂಕ್ ಹೇಳಿತ್ತು. ಅಂತರರಾಷ್ಟ್ರೀಯ ಹಣಕಾಸು ನಿಧಿ ಹಾಗೂ ಏಷ್ಯಾ ಅಭಿವೃದ್ಧಿ ಬ್ಯಾಂಕ್‌ಗಳೂ ಸಹ ಭಾರತದ ಬೆಳವಣಿಗೆ ದರ ಶೇ. 7ರಷ್ಟರಲ್ಲಿದೆ ಎಂದು ತಿಳಿಸಿದ್ದವು.

# ವಿಕಾಸ ಪರಿಷತ್‌ನಿಂದ ಭದ್ರೆಗೆ ಬಾಗಿನ



ದಾವಣಗೆರೆ, ಸೆ. 3- ಭಾರತ ವಿಕಾಸ್ ಪರಿಷತ್ ಗೌತಮ ಶಾಖೆಯ ಕಾರ್ಯಕಾರಿ ಸದಸ್ಯರು ಹಾಗೂ ಇತರೆ ಸದಸ್ಯರು ಭದ್ರೆಗೆ ಹಾಗೂ ಕೂಡಲಿಯ ತುಂಗಾ-ಭದ್ರಾ ಸಂಗಮದಲ್ಲಿ ಬಾಗಿನ ಸಮರ್ಪಣಾ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ಭಾರತ ವಿಕಾಸ ಪರಿಷತ್ ಅಧ್ಯಕ್ಷ ಅಜ್ಜಂಪುರ ವಿಜಯಕುಮಾರ್, ವಿಕಾಸ ಪರಿಷತ್ ಪ್ರಾಂತೀಯ ಕಾರ್ಯದರ್ಶಿ ಟಿ.ಎಸ್. ಜಯರುದ್ರೇಶ್, ಶ್ರೀಮತಿ ಸುಧಾ ಜಯರುದ್ರೇಶ್, ಕಾರ್ಯದರ್ಶಿ ಮಧುಕರ್, ಡಾ. ಆರತಿ ಸುಂದರೇಶ್, ಶಾಂತಾ ತಿಪ್ಪಣ್ಣ, ನಯನ ಲೋಕೇಶ್, ಡಾ. ಶಶಿಕಲಾ ಎಸ್.ಟಿ. ವಿಜಯೇಂದ್ರ ಮತ್ತಿತರರು ಉಪಸ್ಥಿತರಿದ್ದರು.



# ಹರಪನಹಳ್ಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಲೇಪಾಕ್ಷಪ್ಪ

ಹರಪನಹಳ್ಳಿ,ಸೆ.3- ಹರಪನಹಳ್ಳಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಯಾಗಿ ಎಚ್. ಲೇಪಾಕ್ಷಪ್ಪ ಅವರು ಇಂದು ಅಧಿಕಾರ ವಹಿಸಿಕೊಂಡರು. ಇವರು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿದ್ದರು.

# ಹಳೇಪೇಟೆಯಲ್ಲಿ ವೀರಭದ್ರೇಶ್ವರ ಸ್ವಾಮಿ ಜಯಂತ್ಯೋತ್ಸವ



ದಾವಣಗೆರೆ, ಸೆ. 3 - ಭಾದ್ರಪದ ಮಾಸದ ಮೊದಲ ಮಂಗಳವಾರ ನಗರದ ಹಳೇಪೇಟೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಜಯಂತ್ಯೋತ್ಸವ ನಡೆಯಿತು. ಜಯಂತ್ಯೋತ್ಸವದ ಪ್ರಯುಕ್ತ ಶ್ರೀ ಸ್ವಾಮಿಗೆ ವಿಶೇಷ ಪೂಜೆ ಅಲಂಕಾರ ಮಾಡಲಾಗಿತ್ತು. ಶ್ರೀ ವೀರಭದ್ರೇಶ್ವರ ದೇವಸ್ಥಾನ ಸಮಿತಿಯಿಂದ ಪ್ರಸಾದ ವಿತರಣೆ ನೆರವೇರಿಸಲಾಯಿತು.

# 29ರಂದು ವೀರಶೈವ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ



ಬೆಂಗಳೂರು,ಸೆ.3- ಇದೇ ದಿನಾಂಕ 29ರಂದು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ ಎಂದು ಚುನಾವಣಾಧಿಕಾರಿ ಎಂ.ಬಿ.ದ್ಯಾಬೇರಿ ತಿಳಿಸಿದ್ದಾರೆ.

ನಾಡಿದ್ದು ದಿನಾಂಕ 5ರಿಂದ 11ರವರೆಗೆ ನಾಮಪತ್ರ ಸಲ್ಲಿಸಬಹುದು. ಸೆ.12ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಸೆ.15 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ.

# ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಇಲ್ಲ

ನಗರ ಮತ್ತು ಗುಡುಗೂರ-ಮೈದೂರ ಸ್ಟೇಷನ್‌ನಿಂದ ಹೊರಡುವ ಮಾರ್ಗದ ಎಲ್ಲಾ ಗ್ರಾಮೀಣ ಭಾಗದಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ಭಾವಸಾರ ಕ್ಷತ್ರಿಯ ಹಾಸ್ಟೆಲ್ ಆರಂಭ

ದಾವಣಗೆರೆ, ಸೆ. 3- ಇಲ್ಲಿನ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದ ಸಮೀಪವಿರುವ ಭಾವಸಾರ ಕ್ಷತ್ರಿಯ ಹಾಸ್ಟೆಲ್ ಪುನರಾರಂಭವಾಗಿದೆ.

ಸುಸಜ್ಜಿತ ವಸತಿ ಶಾಲೆ ಜೊತೆಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಪಿಯುಸಿ ಹಾಗೂ ನಂತರದ ಓದುವ ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ. ಪುರುಷ ನೌಕರರಿಗೂ ಪ್ರವೇಶಾವಕಾಶ ನೀಡಲಾಗಿದೆ. ಆಸಕ್ತರು ಮೊಬೈಲ್ 94481-55092, 9686744588 ಗೆ ಸಂಪರ್ಕಿಸಬಹುದು.








# ಮಹಾನಗರ ಪಾಲಿಕೆ ನಿರ್ಲಕ್ಷ್ಯಕ್ಕೊಂದು ಕನ್ನಡಿ

**ದಾವಣಗೆರೆಯ ಪ್ರಮುಖ ರಸ್ತೆಗಳಲ್ಲೊಂದಾದ ಚಾಮರಾಜ ಪೇಟೆ ರಸ್ತೆಯಲ್ಲಿನ ಮ್ಯಾನ್‌ಹೋಲ್ ಚಿತ್ರಣವಿದು. ಮ್ಯಾನ್‌ಹೋಲ್ ಮುಚ್ಚಳ ಇಲ್ಲದೆ ಒಂದೆರಡು ತಿಂಗಳಾದರೂ ಪಾಲಿಕೆ ಅಧಿಕಾರಿಗಳು ಇತ್ತ ಗಮನ ಹರಿಸಿಲ್ಲ. ದಿನವೂ ಒಂದಲ್ಲೊಂದು ವಾಹನಗಳಿಗೆ ಇದರಿಂದ ತೊಂದರೆಯಾಗುತ್ತಿದೆ. ಮಂಗಳವಾರ ಸೇಬು ಹಣ್ಣಿನ ಗಾಡಿಯೊಂದು ಉರುಳಿ, ಸೇಬು ಮ್ಯಾನ್‌ಹೋಲ್‌ನಲ್ಲಿ ಬಿದ್ದ ಘಟನೆ ನಡೆಯಿತು.**

# ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಸೆ. 3- ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ನೀಡಲು ಕ್ರೀಡಾ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಇದೇ ದಿನಾಂಕ 10 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ಸ್ಟೇಡಿಯಂ, ದಾವಣಗೆರೆ ಇಲ್ಲಿಗೆ ಅರ್ಜಿ ಸಲ್ಲಿಸಲು ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.






## ಅಭಿನಂದನೆಗಳು



ದಾವಣಗೆರೆ ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯುತ್ ಮತ್ತು ವಿದ್ಯುನ್ಮಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ **ನಂದೀಶ್ ಬಾದಾಮಿ** ಅವರಿಗೆ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯವು ಪಿ.ಎಚ್‌ಡಿ. ಪದವಿ ಪ್ರದಾನ ಮಾಡಿದೆ. ಇವರು ವಿದ್ಯುತ್ ಮತ್ತು ವಿದ್ಯುನ್ಮಾನ ವಿಭಾಗದ ಪ್ರಾಧ್ಯಾಪಕ **ಡಾ. ಪುಷ್ಪರಾಜ್** ಅವರ ಮಾರ್ಗದರ್ಶನದಲ್ಲಿ 'ಡಿಸೈನ್ ಅಂಡ್ ಸಿಮ್ಯುಲೇಷನ್ ಆಫ್ ಇಂಟಲಿಜೆಂಟ್ ಐಒಟಿ ಬೇಸ್ಡ್ ಫಾರ್ ಇಂಪ್ರೂವಿಂಗ್ ಮೈಕ್ರೋಗ್ರಿಡ್ ಎಫಿಷಿಯನ್ಸಿ' ವಿಷಯದ ಮೇಲೆ ಮಂಡಿಸಿದ ಮಹಾ ಪ್ರಬಂಧಕ್ಕೆ ಪಿ.ಎಚ್‌ಡಿ ಪದವಿ ನೀಡಿ ಗೌರವಿಸಿದೆ.

**ಡಾ. ಬಿ.ಎಂ. ನಂದೀಶ್ ಅವರಿಗೆ ಶುಭ ಕೋರುವವರು :**

- ಮಂಜುಳ ಶಿವಾನಂದಪ್ಪ, ಪಟ್ಟಣಶೆಟ್ಟಿ
- ಭದ್ರಿನಾಥ ಪ್ರತಿಭಾ ಪಟ್ಟಣಶೆಟ್ಟಿ
- ಅನನ್ಯ, ರೋಹನ್ ಪಟ್ಟಣಶೆಟ್ಟಿ
- ರಾಜೇಶ ಮಧು ನಾಗೂರು
- ಕಾರ್ತಿಕ್, ಚೈತ್ರ, ನಾಗೂರು, ರಾಣೇಬೆನ್ನೂರು

॥ ಶ್ರೀ ಸೋಮೇಶ್ವರ ಪ್ರಸನ್ನ ॥

## ವೈಕುಂಠ ಸಮಾರಾಧನೆ ಆಹ್ವಾನ

ಶ್ರೀ ಬಾಳಕೃಷ್ಣ ವಾಸುದೇವ್ ಕುರ್ಡೇಕರ್ ಅವರ್ಸಾ, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 22-08-2024ನೇ ಗುರುವಾರ ಬೆಳಿಗ್ಗೆ 11-10ಕ್ಕೆ ನನ್ನ ಧರ್ಮಪತ್ನಿಯಾದ

ಜನನ : 09.11.1954



ನಿಧನ : 22.08.2024

**ಶ್ರೀಮತಿ ರಾಧಾಬಾಯಿ ಬಾಳಕೃಷ್ಣ ಕುರ್ಡೇಕರ್**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ವೈಕುಂಠ ಸಮಾರಾಧನೆ'ಯನ್ನು ದಿನಾಂಕ 04-09-2024ನೇ ಬುಧವಾರ ಮಧ್ಯಾಹ್ನ 1-30 ಗಂಟೆಗೆ ದಾವಣಗೆರೆಯ ಶ್ರೀ ಕೃಷ್ಣ ಕಲಾ ಮಂದಿರ ಎಂ.ಸಿ.ಸಿ. 'ಎ' ಬ್ಲಾಕ್‌ನ ಸಭಾಂಗಣದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

: ದುಃಖತಪ್ತರು :

ರಾಮ್‌ದಾಸ್, ಪ್ರಶಾಂತ್ ಮತ್ತು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುರ್ಡೇಕರ್ ವಂಶಸ್ಥರು ಮತ್ತು ಬಂಧು ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಏಳನೇ ವರ್ಷದ ಪುಣ್ಯಸ್ಮರಣೆ



**ದಿ॥ ಶ್ರೀ ಜೈ ಸಿಂಗ್ (ಜಯಣ್ಣ)**

ಜನನ : 01.06.1954, ಮರಣ 04.09.2017

(ದಿ॥ ಶ್ರೀ ಗಂಗಾರಾಮ್ ಸಿಂಗ್ ಇವರ ದ್ವಿತೀಯ ಪುತ್ರ)

ಮಾಲೀಕರು : ಶ್ರಮಜೀವಿ ಮಷೀನ್ ಟೆಕ್, ಶ್ರಮಜೀವಿ ಡೀಲಕ್ಸ್ ಲಾಡ್ಜ್, ಆದಿತ್ಯ ಇಂಡಸ್ಟ್ರೀಸ್, ದಾವಣಗೆರೆ.

ನಮಗೆಲ್ಲರಿಗೂ ದಾರಿದೀಪವಾಗಿ, ಬದುಕಿಗೆ ಪ್ರೇರಕವಾಗಿ, ಭವಿಷ್ಯಕ್ಕೆ ಬೆಳಕಾಗಿ, ಆದರ್ಶರಾಗಿ ಬಾಳಿದ ನಿಮ್ಮ ನೆನಪು ಎಂದೆಂದಿಗೂ ನಮ್ಮಲ್ಲಿ ಶಾಶ್ವತ....

ದುಃಖತಪ್ತರು : ಧರ್ಮಪತ್ನಿ : ಶ್ರೀಮತಿ ಶಶಿಕಲಾ ಜೈ ಸಿಂಗ್,

ಮಕ್ಕಳಾದ : ಶ್ರೀಮತಿ ಸೌಮ್ಯ ಮತ್ತು ವಿವೇಕ್ ಸಿಂಗ್

ಶ್ರೀಮತಿ ನಂದಿನಿ ಮತ್ತು ಶ್ರೀ ಭಗವಾನ್ ಸಿಂಗ್

ಶ್ರೀಮತಿ ನವ್ಯ ಸಿಂಗ್ ಮತ್ತು ವಿಶಾಲ್ ಸಿಂಗ್

ಸಹೋದರರಾದ : ಶ್ರೀ ಪ್ರತಾಪ್ ಸಿಂಗ್, ಶ್ರೀ ಮಹೇಂದ್ರ ಸಿಂಗ್

ಶ್ರೀ ಅನಿಲ್ ಕುಮಾರ್ ಸಿಂಗ್, ದಾವಣಗೆರೆ. ಮೊ. : 98866 50977, 94497 74461

ಮತ್ತು ಇಂಡಸ್ಟ್ರೀಗಳ ಆಡಳಿತ ಮಂಡಳಿ, ಕಾರ್ಮಿಕ ವರ್ಗ, ಬಂಧುಗಳು-ಹಿತೈಷಿಗಳು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas